## 11

# “ನಾನು ಬಲು ವಯಸ್ಸಾದವ ಎಂದು ಯಾರು ಹೇಳುತ್ತಾರೆ?”

## (2 ಅರಸು 1)

ಎಲೀಯನ ಜೀವಿತಕ್ಕೆ ಸಂಬಂಧಿತವಾದ ಒಂದು ಚಿಕ್ಕ ಘಟನೆಯು 2 ಅರಸು 1ರಲ್ಲಿ ಹೇಳಲ್ಪಟ್ಟಿದೆ. ಎಲೀಯನು ಸುಳಿಗಾಳಿಯಲ್ಲಿ ತೆಗೆದುಕೊಂಡು ಹೋದಂತ ಎಲೀಯನ ಜೀವನದ ಕಥೆಯ ಅದ್ಭುತವಾದ ಕ್ಲೈಮಾಕ್ಸ್ ಸನ್ನಿವೇಶದ 2ನೇಯ ಅಧ್ಯಾಯಕ್ಕೆ ಹೋಗುವಂತೆ ನಾವು ಪ್ರೇರೇಪಿಸಲ್ಪಡುತ್ತೇವೆ. ಈ ರೀತಿಯಲ್ಲಿ ನಾವು ವಿಚಾರ ಮಾಡುವುದಕ್ಕೆ ಈ ಮೂರು ಕಾರಣಗಳಿವೆ: (1) 2 ಅರಸು 1ನ್ನು ನಾವು ಬಿಟ್ಟುಬಿಟ್ಟರೆ ನಮ್ಮ ಸರಣೀಯ ಅಪೂರ್ಣವಾಗುತ್ತದೆ. (2) ಎಲೀಯನ ಜೀವನದ ಬಗೆಗಿನ ಈ ಅಧ್ಯಾಯದಲ್ಲಿ ಸಿಕ್ಕುವ ಕೆಲ ಪಾಠಗಳು ಇತರೆ ಭಾಗಗಲ್ಲಿ ನಮಗೆ ಸಿಕ್ಕುವುದಿಲ್ಲ. ಈ ಪಾಠಗಳು ಎಷ್ಟು ಮುಖ್ಯವಾಗಿವೆ ಎಂದರೆ ಇವನ್ನು ದೇವರೇ ನಮಗಾಗಿ ಈ ಕಥೆಯನ್ನು ದಾಖಲಿಸಿದ್ದಾನೆ. (3) ಹಿಂದಿನ ಪಾಠಗಳಲ್ಲಿ ನಾವು ಕೆಲ ಸಡಿಲವಾದ ಕೊನೆಗಳನ್ನು ಬಿಟ್ಟಿದ್ದೇವೆ ಅವುಗಳು ಇಲ್ಲಿ ಕಟ್ಟಲ್ಪಟ್ಟಿವೆ.

ಇಲ್ಲಿ ನಾವು ಮೂರು ವ್ಯಕ್ತಿಗಳನ್ನು ನೋಡುತ್ತೇವೆ. ಇಬ್ಬರು ನಮ್ಮ ವೇದಭಾಗದಲ್ಲಿ ಕಾಣಿಸಿದ್ದಾರೆ, ಮೂರನೆಯವರು ಇಂದು ನಮ್ಮ ವೀಕ್ಷಕರಲ್ಲಿ ಕಾಣಿಸಿಕೊಳ್ಳುತ್ತಾರೆ ಕೊನೆಯ ವ್ಯಕ್ತಿಯತ್ತ ನೋಡುವಂತೆ ನಾವು ನಮ್ಮ ಪಾಠವನ್ನು ನೋಡುವಾ.

### ಉತ್ತರ ಇಸ್ರಾಯೇಲಿನ ತಿರುಗಿಬಿದ್ದ ಅರಸ (1:1-9)

ಈ ತಿರುಗಿಬಿದ್ದ ಅರಸನು ಎಲೀಯನು ಇಪ್ಪತ್ತು ವರ್ಷಗಳಿಂದ ಯುದ್ಧವನ್ನು ಸಾರಿದ್ದವನೂ ಆದ ಆಹಾಬನಲ್ಲ, ಆದರೆ ಬದಲಾಗಿ ಆತನ ಮಗನಾದ (ಬಹುಶಃ ಆತನ ಹಿರಿಯ ಮಗನು) ಅಹಜ್ಯನಾಗಿದ್ದನು. ಅಹಜ್ಯನು ಮಾಡಿದ ಮೂರು ಸಂಗತಿಗಳನ್ನು ಗಮನಿಸಿರಿ.

*ಅಹಜ್ಯನು ತನ್ನ ಹಿಂದಿನ ಜೀವಿತವನ್ನು ಅಲಕ್ಷಿಸಿದನು.* ಆತನ ಕಥೆಯು 1 ಅರಸು ಕೊನೆಯ ಭಾಗದಿಂದ ಪ್ರಾರಂಭವಾಗುತ್ತದೆ:

> ಅರಸನು (ಆಹಾಬನು) ಸಾಯಲು ಅವನನ್ನು ಸಮಾರ್ಯಕ್ಕೆ ತಂದು ಅಲ್ಲಿ ಸಾಮಾಧಿ ಮಾಡಿದರು. ದೇವದಾಸಿಯರು ಸ್ನಾನಮಾಡುವ (ಈಗ ವೇಶ್ಯಯರು ಅಲ್ಲಿ ತಮ್ಮ ಮೈಯನ್ನು ತೊಳೆದುಕೊಳ್ಳುತ್ತಾರೆ) ಕೆರೆಯಲ್ಲಿ ಅವನ ರಥವನ್ನು ತೊಳೆಯುತ್ತಿದ್ದಾಗ ನಾಯಿಗಳು ಬಂದು ಅದರಲ್ಲಿದ್ದ ರಕ್ತವನ್ನು ನೆಕ್ಕಿದವು; ಹೀಗೆ ಯೆಹೋವನು ಹೇಳಿದ ಮಾತು ನೆರವೇರಿತು ... ಆಹಾಬನು ಪಿತೃಗಳ ಬಳಿಗೆ ಸೇರಲು ಅವನಿಗೆ ಬದಲಾಗಿ ಅವನ ಮಗನಾದ ಅಹಜ್ಯ ಎಂಬವನು ಅರಸನಾದನು (1 ಅರಸು 22:37, 38, 40).

ಅಹಜ್ಯನು ತನ್ನ ಹಿಂದಿನ ಜೀವಿತದಿಂದ ಕಲಿಯಬೇಕಿತ್ತು. ಆತನು ಬೆಳೆದಂತೆಲ್ಲ, ಮೂರುವರೆ ವರ್ಷಗಳ ಬರಗಾಲ; ಕರ್ಮೆಲ ಬೆಟ್ಟದಲ್ಲಿನ ಬೆಂಕಿಯನ್ನು ಮತ್ತು ಬಾಳನ ಪ್ರವಾದಿಗಳ ಸಂಹಾರ; ಮತ್ತು ನಾಬೋತನ ದ್ರಾಕ್ಷೇತೋಟವನ್ನು ತೆಗೆದುಕೊಂಡದ್ದಕ್ಕೆ

ಬಂದ ಶಾಪ, ಅದನ್ನು ಅನುಸರಿಸಿ ತದನಂತರದಲ್ಲಿ ಬಂದ ಮೂರುವರ್ಷಗಳ ಬಲವಾದ ಕ್ಷಾಮ ಹೀಗೆ ಆತನು ಎಲೀಯನ ಬಗೆಗಿನ ಎಲ್ಲಾ ಕಥೆಗಳನ್ನು ಕೇಳಿರುವದರಲ್ಲಿ ಯಾವುದೇ ಸಂಶಯವಿಲ್ಲ. ನಿಶ್ಚಿತವಾಗಿ ಆತನು ಇದರಿಂದ ಏನನ್ನೂ ಕಲಿಯಲಿಲ್ಲ.

> ಯೆಹೂದ್ಯರ ಅರಸನಾದ ಯೆಹೋಷಾಫಾಟನ ಆಳಿಕೆಯ ಹದಿನೇಳನೆಯ ವರುಷದಲ್ಲಿ ಆಹಾಬನ ಮಗನಾದ ಅಹಜ್ಯ ಎಂಬವನು ಅರಸನಾಗಿ ಸಮಾರ್ಯದಲ್ಲಿ ಎರಡು ವರುಷ ಆಳಿದನು. ಇವನು ಇಸ್ರಾಯೇಲ್ಯರನ್ನು[1] ಪಾಪಕ್ಕೆ ಪ್ರೇರಿಸಿದ ನೆಬಾಟನ ಮಗನಾದ ಯಾರೊಬ್ಬಾಮನ ಮತ್ತು ತನ್ನ ತಂದೆ ತಾಯಿಗಳ ಮಾರ್ಗದಲ್ಲಿ ನಡೆದು ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದನು (1 ಅರಸು 22:51, 52).

ಆತನು "ತನ್ನ ತಂದೆಯ ಮಾರ್ಗದಲ್ಲಿ ನಡೆದನು" ಆತನು ತನ್ನ ತಂದೆಯ ಬಲಹೀನತೆಯನ್ನು ವಂಶಪಾರಂಪರ್ಯವಾಗಿ ಪಡೆದಿದ್ದನು. ಹೆಚ್ಚು ಮಹತ್ವವಾಗಿ, ಆತನು "ತನ್ನ ತಾಯಿಯ ಮಾರ್ಗದಲ್ಲಿ ... ನಡೆದನು" ಇದೊಂದೇ ಸಾರಿ ಈ ವಿವರಣೆಯು ಬೈಬಲಿನಲ್ಲಿ ಕಂಡುಬಂದಿದೆ. ಆತನ ತಾಯಿ ಈಜಬೇಳಲು, ಇನ್ನೂ ಅರಮನೆಯಲ್ಲಿ ವಾಸಿಸುತ್ತಿದ್ದಳು. ಆತನೂ ಸಹ ಇಸ್ರಾಯೇಲ್ಯರನ್ನು ವಿಗ್ರಹಾರಾಧನೆಯತ್ತ ನಡೆಸಿದ ಇಸ್ರಾಯೇಲ್ಯರ ಉತ್ತರ ರಾಜ್ಯದ ಮೊದಲ ಅರಸನಾದ "ಯೆರೋಬ್ಬಾಮನ ಮಾರ್ಗದಲ್ಲಿಯೆ ನಡೆದನು." "ಹೀಗೆ ಆತನು ತನ್ನ ತಂದೆಯಂತೆ ಬಾಳ ದೇವರನ್ನು ಪೂಜಿಸಿ (ತಾಯಿಯಂತೆ ಮಗನು) ಇಸ್ರಾಯೇಲ್ ದೇವರಾದ ಯೆಹೋವನನ್ನು ರೇಗಿ ಸಿದನು" (ವಚನ 53).

ತಕ್ಷಣವೆ ಸಮಸ್ಯೆಯು ಎದುರಾಯಿತು: "ಆಹಾಬನು ಮರಣಹೊಂದಿದ ನಂತರ ಮೋವಾಬ್ಯರು ಇಸ್ರಾಯೇಲ್ಯರಿಗೆ ವಿರೋಧವಾಗಿ ತಿರುಗಿಬಿದ್ದರು" (1:1).[2] ಮೋವಾಬ್ ಇನ್ನೂ ಇಸ್ರಾಯೇಲ್ಯರ ಪ್ರಾಬಲ್ಯದಲ್ಲಿ ಬಹುದಿನಗಳವರೆಗೆ ಇದ್ದಿತು;[3] ಅವರು ಈಗ ತಮ್ಮ ಸ್ವತಂತ್ರ್ಯವನ್ನು ತಿರುಗಿಪಡೆದರು.[4] ಹೆಸರಾಂತ ಮೋವಾಬ ಕಲ್ಲು ಇಸ್ರಾಯೇಲ್ಯರು ಸೋತು ಹೋದಂತಹ ಈ ಸ್ವಾತಂತ್ರದ ಹೋರಾಟದ ಬಗೆಗೆ ಹೇಳುವಂತದ್ದಾಗಿದೆ. ಒಂದು ಆಕ್ರಮಣದಲ್ಲಿ ಏಳುಸಾವಿರ ಇಸ್ರಾಯೇಲ್ ಪುರುಷರು ಕೊಲ್ಲಲ್ಪಟ್ಟರು; ಸ್ತ್ರೀಯರು ಮತ್ತು ಮಕ್ಕಳು ಗುಲಾಮರಾಗಿ ತೆಗೆದುಕೊಂಡು ಹೋಗಲ್ಪಟ್ಟರು. ಒಬ್ಬ ಬರಹಗಾರನು ಈ ತಿರುಗಿಬಿದ್ದ ಅರಸನ ಅಲ್ಪ ಆಳ್ವಿಕೆಯ ಅಂತ್ಯ ಸಮೀಪಿಸಿದ ಒಂದು ಘಟನೆಯ ಬಗೆಗೆ ಹೆಚ್ಚು ಗಮನಹರಿಸುವವನಾಗಿದ್ದಾನೆ.

*ಅಹಜ್ಯನು ಶ್ರೇಷ್ಠ ವೈದ್ಯನನ್ನು ಅವಮಾನಿಸಿದನು:* "ಅಹಜ್ಯನು ಸಮಾರ್ಯದಲ್ಲಿ ತನ್ನ ಮೇಲುಪ್ಪರಿಗೆಯ ಜಾಳಾಂಧರ ಕಿಟಕಿಯಿಂದ ಬಿದ್ದು ಅಸ್ವಸ್ಥನಾದನು" (ವಚನ 2ಎ). ಅಹಜ್ಯನು ರಾಜಧಾನಿಯಲ್ಲಿ ಪ್ರಾಯಶಃ ತನ್ನ ಅರಮನೆಯಲ್ಲಿ ಇದ್ದನು. ಆತನು ತೆರೆದ ಕಿಟಕಿಯ ದೊಡ್ಡ ಮೇಲುಪ್ಪರಿಗೆಯ ಕೋಣೆಯಲ್ಲಿ ಇದ್ದನು. ಈ ಕಿಟಕಿಗಳು ಜಾಲರಿ ಕೆಲಸದವುಗಳಿಂದ ಹೊದಿಸಿದ, ಕಟ್ಟಿಗಯ ಅಲಂಕಾರಿಕ ರಂಧ್ರಗಳನ್ನು ಹೊಂದಿದ್ದು, ಅಲಂಕರಣಕ್ಕಾಗಿ ಮತ್ತು ಪ್ರತ್ಯೇಕತೆಗಾಗಿ ರೂಪಿಸಿದಂತಿತ್ತು. ಹೀಗೆ ಅಹಜ್ಯನು ಕಿಟಕಿಯ ಅಂಚಿನಲ್ಲಿ ಕೂತುಕೊಂಡಿದ್ದನು. ಆತನು ಜಾಲರಿಗ ಆತುಕೊಡಂತೆಯೇ ಅದು ಬಿದ್ದು ಹೋಯಿತು, ಮತ್ತು ಆತನು ಬಿದ್ದನು. ಆತನು ಕೊಲ್ಲಲ್ಪಡಲಿಲ್ಲ, ಆದರೆ ಆತನು ಗಂಭೀರವಾಗಿ ಗಾಯಗೊಂಡನು ಮತ್ತು ಆತನು ವಾಸಿಯಾಗಲಿಲ್ಲ.

ದೈವಿಕ ಕೊಡುಗೆಯ ಬಗ್ಗೆ ನಾನು ತಪ್ಪಾಗಿ ಹೇಳುವುದಿಲ್ಲ ನಾನು ಹೇಳಿಕೊಳ್ಳಲಾರೆನು.[5] ಇರಬಹುದು, ಕೇವಲ ಇರಬಹುದು, ಹೇಗೋ, ಈ ಆಕಸ್ಮಿಕವು ಅಹಜ್ಯನಿಗೆ ದೊಡ್ಡ ವಿಚಾರಗಳನ್ನು ಯೋಚನೆ ಮಾಡಲು ಕಾರಣವಾಯಿತು, ಇದು ಅಹಜ್ಯನಿಗೆ ಯೆಹೋವನೆಡೆಗೆ ತಿರುಗಿಕೊಳ್ಳಲು ಯೋಗ್ಯಸಮಯವಾಗಿತ್ತು "ನಾನು ಬಾಧೆಪಟ್ಟವನಾಗಿದ್ದರಿಂದ ಇದು ನನಗೆ ಒಳ್ಳೆಯದಾಯಿತು" ಎಂದು ಕೀರ್ತನೆಗಾರನು ಹೇಳುವಂತೆ "ಕಷ್ಟಾನುಭವವು

ಹಿತಕರವಾಯಿತು'' (ಕೀರ್ತನೆ 119:71). ಇದು ಅಹಜ್ಯನು ಅರಿವಿಗೆ ಬರಲು ಯೋಗ್ಯವಾದ ಸಮಯವಾಗಬಹುದಿತ್ತು, ಆದರೆ ಆತನು ಹಾಗೆ ಮಾಡಲಿಲ್ಲ.

ಬದಲಾಗಿ, ಆತನು ದಿವ್ಯ ವೈದ್ಯನನ್ನು ಅವಮಾನಿಸಿದನು. ತಮ್ಮ ಸೇವಕರನ್ನು ಕರೆದು ಅವರಿಗೆ "ನೀವು ಎಕ್ರೋನಿನ ದೇವರಾದ ಬಾಳ್ಜೆಬೂಬನ ಸನ್ನಿಧಿಗೆ ಹೋಗಿ ನಾನು ಈ ಅಸ್ವಸ್ಥತೆಯಿಂದ ವಾಸಿಯಾಗುವೆನೋ ಇಲ್ಲವೋ ಎಂಬುದನ್ನು ವಿಚಾರಿಸಿರಿ'' (ವಚನ 2ಬಿ) ಎಂದು ಹೇಳಿದನು. "ಬಾಳ್ಜೆಬೂಬನು'' ಇದೊಂದು ಸಂಯುಕ್ತ ಹೆಸರಾಗಿದೆ. ಮೊದಲ ಭಾಗವು ನಾವು ಈಗಾಗಲೇ ಗುರುತಿಸಿದಂತಹ "ಬಾಳ" ಎಂದು ಇದ್ದು ಇದು ಈಜಬೇಲಳಿಂದ ಪರಿಚಯಿಸಿದ ದೇವರಾಗಿತ್ತು. ಈ ಹೆಸರಿನ ಅರ್ಥವು "ಕರ್ತನು'' ಅಥವಾ "ದೇವರು" ಎಂದಾಗಿದೆ. ಎರಡನೆಯ ಭಾಗವಾದ "ಝೋಬೂಬ" ಕ್ರಿಯಾಪದದಿಂದ ಬಂದ ಅರ್ಥವಾಗಿದ್ದು ಅಲ್ಲಿ ಮತ್ತು ಇಲ್ಲಿ ಹೋಗುವದು ಹಿಂದಕ್ಕೆ ಮುಂದಕ್ಕೆ ನೇತಾಡುವ ಎಂಬರ್ಥವನ್ನು ಕೊಡುತ್ತದೆ. "ಬಾಳ್ಜೆಬೂಬ'' ಇದರ ಅಕ್ಷರ ಸಹ ಅರ್ಥವು "ಹುಳುಗಳ ದೇವರು'' ಎಂದು. (ಅನೇಕ ಮಕ್ಕಳು ಆ ಸಮಯದಲ್ಲಿ ಈ ಹೆಸರಿನ ಕಾದಂಬರಿಗಳನ್ನು ಓದುವುದನ್ನು ಬಯಸುವವರಾಗಿದ್ದರು.[6])

ಬಾಳನು ಸೃಷ್ಟಿಯ ದೇವರೆಂದು ಪರಿಗಣಿಸಲ್ಪಟ್ಟಿದ್ದನು. ಬಾಳ್ಜೆಬೂಬನು ಸ್ಥಳೀಯ ರೂಪವಾಗಿದ್ದ ಹುಳುಗಳ ನಿಯಂತ್ರಣಕ್ಕಾಗಿ ಇದ್ದನು. ಮೊದಲ ನೋಟದಲ್ಲಿ, ಅದು ಅಷ್ಟೊಂದು ಹೆಚ್ಚು ಒತ್ತನ್ನು ಕೊಡುವುದಿಲ್ಲ. ಹುಳು ಅತಿ ಚಿಕ್ಕದಿರುತ್ತದೆ.[7] ನಾವು ಅದನ್ನು ಜಜ್ಜಬಹುದು ಅಥವಾ ಹುಳುಗಳ ಔಷಧಿಯನ್ನು ಸಿಂಪಡಿಸಬಹುದು. ನಮ್ಮಲ್ಲಿ ಕೆಲವರು ಅಲ್ಲಿ ಸ್ವಚ್ಛತೆಯ ನಿಯಮಗಳು ಇದ್ದವು ಮತ್ತು ಕಿಟಕಿಗೆ ಕೆಲಪರದೆಗಳು ಇದ್ದವು; ಎಂದು ನೆನಪುಮಾಡಿಕೊಳ್ಳುತ್ತಾರೆ; ಇಂಥ ಪರಿಸ್ಥಿತಿಯಲ್ಲಿ, ಹುಳುಗಳು ಬಲು ಗಮನಾರ್ಹವಾದವುಗಳು ಆಗಿದ್ದವು.

ಒಂದು ಹಳೆಯ ಕಥೆಯು, ಊಟದ ಮೇಜಿನ ಮಧ್ಯದಲ್ಲಿ ಇಡಲ್ಪಟ್ಟ ಕಡಬನ್ನು ತೋರಿಸುತ್ತ "ನನ್ನ ಹತ್ತಿರ ಕೆಲ ಒಣದ್ರಾಕ್ಷಿಯ ಕಡುಬುಗಳಿವೆ" ಎಂದು ಹೇಳುತ್ತಿದ್ದಂಥ ಒಬ್ಬ ಅತಿಥಿ ಬೋಧಕನ ಬಗೆಗೆ ಹೇಳುತ್ತದೆ. ಅತಿಥೇಯಳು (ಗೃಹಣಿ) ತನ್ನ ಕೈಯನ್ನು ಕಡುಬಿನ ಮೇಲೆ ಆಡಿಸುತ್ತಾ ಹುಳುಗಳ ಹಿಂಡನ್ನು ದೂರ ಓಡಿಸುತ್ತಿದ್ದಳು. "ಇದು ಒಣದ್ರಾಕ್ಷಿಯಲ್ಲದ" ಬದಲಾಗಿ "ಇದು ಕಸ್ಟರ್ಡ್‌ದಿಂದ'' ಮಾಡಿದ್ದು ಎಂದು ಆಕೆಯು ಹೇಳಿದಳು.

ಅಸ್ಟ್ರೇಲಿಯಾದ ಮಿಶನರಿಯಾಗಿರುವಂತ ನಾನು ಆದೇಶಕ್ಕೆ ಹೋದಾಗ ಅಲ್ಲಿ ಕೇವಲ ಕಂಟ್ರಿಕ್ರಿಮಿಗಳು ಇದ್ದವು. ಈ ಕ್ರಿಮಿಕೀಟಗಳು ತಂಪನ್ನು ಬಯಸುವಂತವುಗಳಾಗಿದ್ದವು ಆಗಿದ್ದವು. ಇದರ ಅರ್ಥವು ಅವು ಮನುಷ್ಯನ ಬೆವರು ಬರುವಂತಹ ಸ್ಥಳಗಳಾದ ಕಣ್ಣು ಮೂಗು, ಬಾಯಿ, ಅಥವಾ ದೇಹದ ಯಾವುದೇ ಭಾಗವನ್ನು ಆಕ್ರಮಿಸುತ್ತಿದ್ದವು. ಒಂದು ಸಾರಿ ಆಸ್ಟ್ರೇಲಿನ ಪಟ್ಟಣದ ಚಿಕ್ಕದ್ವೀಪದಲ್ಲಿನ ಬೇಸಿಗೆ ಶಿಬಿರದ ಒಂದು ಗುಂಪು ಒಂದು ಮನೆಯ ಬಾಗಿಲನ್ನು ತಟ್ಟುವಾಗ ನಾನು ವಿದ್ಯಾರ್ಥಿಗಳ ಹಿಂದೆ ನಡೆದಾಡುತ್ತಿದ್ದೆನು. ಆತನ ಬಿಳಿಶರ್ಟ್ ಹಿಂದುಗಡೆ ಬೆವರಿನಿಂದ ವದ್ದೆಯಾಗಿತ್ತು ಮತ್ತು ಹುಳುಗಳು ಇಡೀ ಭಾಗವನ್ನು ಕಪ್ಪಾಗಿ ಪರಿವರ್ತಿಸಿದ್ದವು. ಈ ರೀತಿಯಲ್ಲಿ ಮುಖದ ಮುಂದೆ ಕೈಯಾಡಿಸುತ್ತಾ (ಹುಳುಗಳನ್ನು ದೂರ ಓಡಿಸಲು) ಇರುವುದನ್ನು "ಆಸ್ಟ್ರೇಲಿಯನ ಸೆಲ್ಯೂಟ" ಎಂದು ಹೇಳುತ್ತಾರೆ.

"ಬಾಳ್ಜೆಬೂಬ'' ಇದು ಕಿರಿಕಿರಿಯನ್ನೂ ಮತ್ತು ನಾಶನದ ಸಾಮರ್ಥ್ಯವಿರುವ - ಅಥವಾ (ಸಮಾನ ಮಹತ್ವವಿರುವ) ದೇವರು ಎಂದು ಅಥವಾ (ಸಮಾನ ಮಹತ್ವವಿರುವ) ಆ ಕಿರಿಕಿರಿಯನ್ನು ತೆಗೆದುಹಾಕುವಂತಹ ಸಾಮಾರ್ಥ್ಯವನ್ನು ಹೊಂದಿದ ದೇವರು ಎಂದು ಸೂಚಿಸಲಾಗಿದೆ. ಹೊಸ ಒಡಂಬಡಿಕೆಯ ಸಮಯದಿಂದ, ಬಾಳ್ಜೆ ಬೂಬನು ಮೂಢನಂಬಿಕೆಯ ಜನರ ಪ್ರಾಂತಗಳಲ್ಲಿ ಸಾಧನೆ ಮಾಡಿದ್ದನು. ಮತ್ತಾಯ 12:22-28 ಯೇಸುವು ದೆವ್ವವನ್ನು ಓಡಿಸಿದ್ದನ್ನು ಹೇಳುತ್ತದೆ. ಆತನು ಅಧ್ಭುತ ಕಾರ್ಯಗಳನ್ನು ಮಾಡಿದನು ಎಂಬುದನ್ನು ಫರಿಸಾಯರು ತಳ್ಳಿಹಾಕರು, ಆದರೆ "ಆತನು ದೆವ್ವಗಳ ಒಡೆಯನಾದ ಬೆಳ್ಜೆಬೂಬನ

ಸಹಾದಿಂದ ಮಾಡಿದನು" (ಮತ್ತಾಯ 12:24) ಎಂದು ಅವರು ಹೇಳುತ್ತಾರೆ. ಬೆಜ್ಜಬೂಬನು ಸೈತಾನನು ಅಥವಾ ಸೈತಾನನ ಮುಖ್ಯ ಅಧಿಕಾರಿ ಎಂದು ಪರಿಗಣಿಸಲ್ಪಟ್ಟಿದ್ದನು, ಮತ್ತು ಆತನ ಹೆಸರು ಸ್ವಸ್ಥತೆಯ ಜೊತೆ ಸಂಯೋಜಿಸಲಾಗಿತ್ತು.

ಬೆಲ್ಜೆಬೂಬನ ವಿಗ್ರಹವಿದ್ದ ಈ ಫಿಲಿಷ್ಟಿಯ ಪಟ್ಟಣವು ಮೆಡಿಟರೇನಿಯನ್ ಸಮುದ್ರದ ದಂಡೆಯಲ್ಲಿನ ಎಕ್ರೋನಿನಲ್ಲಿ ಇತ್ತು. ಅಹಜ್ಯನು ಸ್ವಸ್ಥನಾಗಲಿಲ್ಲ, ಆತನು ತನ್ನ ದೂತರನ್ನು ಬೆಲ್ಜೆಬೂಬನನ ಪೂಜಾರಿಗಳ ಹತ್ತಿರ ತಾನು ತನ್ನ ಅಸ್ವಸ್ಥತೆಯಿಂದ ಸ್ವಸ್ಥನಾಗುತ್ತೇನೋ ಇಲ್ಲವೋ ಎಂಬುದನ್ನು ಕೇಳಲು ಕಳುಹಿಸಿದನು. ಕರ್ತನಿಗೆ ಇದು ಅವಮಾನಕರವಾದದ್ದು, ಬಹುಶಃ ಇದು ಸಾರ್ವಜನಿಕವಾದ ಅವಮಾನ, ಆಗಿದೆ. ಇಸ್ರಾಯೇಲಿನಲ್ಲಿ ಈಗಾಗಲೇ ಒಬ್ಬ ದೊಡ್ಡ ವೈದ್ಯನು ಇದ್ದನು, ಆತನು ಅಹಜ್ಯನ ದೈಹಿಕ ಮತ್ತು ಆತ್ಮೀಕ ವ್ಯಾಧಿಗಳೆರಡನ್ನೂ ಗುಣಪಡಿಸುವವನಾಗಿದ್ದನು.

> ಆಗ ಯೆಹೋವನ ದೂತನು ತಿಷ್ಬೀಯನಾದ ಎಲೀಯನಿಗೆ, "ನೀನು ಹೋಗಿ ಸಮಾರ್ಯದ ಅರಸನ ಸೇವಕರನ್ನು ಎದುರುಗೊಂಡು ಅವರಿಗೆ - ನೀವು ಎಕ್ರೋನಿನ ದೇವರಾದ ಬೆಲ್ಜೆಬೂಬನನ್ನು ವಿಚಾರಿಸುವುದಕ್ಕೆ ಹೋಗುವುದೇನು? ಇಸ್ರಾಯೇಲರಲ್ಲಿ ದೇವರಿಲ್ಲವೋ?" (ವಚನ 3).

KJVಯಲ್ಲಿ "ಇಸ್ರಾಯೇಲ್ಯರಲ್ಲಿ ದೇವರಿಲ್ಲದ ಕಾರಣದಿಂದ ಇದು ಆಯಿತೇ?" ಎಂದಿದೆ. ಅದು ಅಸಹ್ಯ ಪದಗಳಿಂದ ಕೂಡಿದ್ದಾಗಿದೆ, ಆದರೆ ಇದು ಮೂಲ ವೇದ ಭಾಗವನ್ನು ಓದಿದಂತಿರುತ್ತದೆ. ಅದರ ಉದ್ದೇಶವು ಎರಡು ನಿಷೇದಾರ್ಥಕಗಳು ಇದಕ್ಕೆ ಒತ್ತನ್ನು ಕೊಡುವವು ಆಗಿವೆ: "ನೀನು ಹೇಳುವಂತೆ ಇಸ್ರಾಯೇಲ್ಯರಲ್ಲಿ ದೇವರಿಲ್ಲ, ಇಲ್ಲವೇ ಇಲ್ಲ ಒಬ್ಬನಾದರೂ ಇಲ್ಲ, ಹೀಗಾಗಿ ನೀನು ಎಕ್ರೋನಿಗೆ ಹೋಗಿರುವಿ!"

ಎಲೀಯನು ಅಹಜ್ಯನಿಗೆ ಆತನ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ "ಆದಕಾರಣ ಅಹಜ್ಯನು ತಾನು ಹತ್ತಿದ ಮಂಚದಿಂದಿಳಿಯದೆ ಸಾಯಲೇ ಬೇಕು ಎಂಬುದಾಗಿ ಯೆಹೋವನು ಅನ್ನುತ್ತಾನೆ" (ವಚನ 4ಎ) ಎಂದನು. "ಆದಕಾರಣ" ಎಂಬ ಪದವು ಸಂಗತಿಗಳು ಕಠಿಣಮಯವಾಗಿದ್ದವು ಎಂಬುದ್ದನ್ನು ಸೂಚಿಸುವುದಾಗಿದೆ, ಒಂದು ವೇಳೆ ಅರಸನು ಯೆಹೋವನನ್ನು ವಿಚಾರಿಸಿದ್ದೇ ಆದರೆ, ಆತನು ತಾಳ್ಮೆಯನ್ನು ಹೊಂದಿದ್ದಾದರೆ, ಆತನ ಆರೋಗ್ಯವು ಸುಧಾರಿಸಬಹುದಿತ್ತು, ಆದರೆ ಆತನ ಹೃದಯದ ಕಠಿಣತೆಯ ಕಾರಣದಿಂದ, ಆತನು ಸತ್ತನು.

ಎಲೀಯನು ದೇವರ ದೂತನು ಹೇಳಿದ ಹಾಗೆಯೇ ಮಾಡಿದನು (ವಚನ 4ಬಿ).

*ಅಹಜ್ಯನು ಪ್ರವಾದಿಯನ್ನು ಬೆದರಿಸಲು ಪ್ರಯತ್ನಿಸಿದ್ದು:* "ದೂತರು ಅರಸನ (ಅಹಜ್ಯನ) ಬಳಿಗೆ ಹಿಂದಿರುಗಿ ಬಂದಾಗ ಅರಸನು ನೀವು ಹಿಂದಿರುಗಿದ್ದೇಕೆ ಎಂದು ಕೇಳಿದನು?" (ವಚನ 5). ದೂತರು ಎಕ್ರೋನಿನ ತನಕ ಹೋಗದೆ ತಿರುಗಿ ಬಂದಿದ್ದರು. ಆತನು ಅವರಿಗೆ "ಏನು ನಡೆಯುತ್ತಿದೆ?" ಎಂದು ಕೇಳಿದನು.

> ಅದಕ್ಕೆ ಅವರು - ಒಬ್ಬ ಮನುಷ್ಯನು ನಮ್ಮನ್ನು ಎದುರುಗೊಂಡು ನಮಗೆ - ನಿಮ್ಮನ್ನು ಕಳುಹಿಸಿದ ಅರಸನ ಬಳಿಗೆ ಹೋಗಿ ಯೆಹೋವನ ಹೆಸರಿನಲ್ಲಿ ಅವನಿಗೆ ನೀನು ಎಕ್ರೋನಿನ ದೇವರಾದ ಬಾಳ್ಜೆಬೂಬನನ್ನು ವಿಚಾರಿಸುವುದಕ್ಕೆ ಕಳುಹಿಸುವುದೇನು? ಇಸ್ರಾಯೇಲ್ಯರಲ್ಲಿ ದೇವರಿಲ್ಲವೋ ನೀನು ಹೀಗೆ ಮಾಡಿದ್ದರಿಂದ ಹತ್ತಿದ ಮಂಚದಿಂದಿಳಿಯದೆ ಸಾಯಲೇಬೇಕು ಎಂಬದಾಗಿ ಹೇಳಿರಿ ಎಂದು ಆಜ್ಞಾಪಿಸಿದನು ಎಂದು ಉತ್ತರ ಕೊಟ್ಟರು. ಅರಸನು ತಿರುಗಿ ಅವರನ್ನು - ನಿಮಗೆ ಎದುರಾಗಿ ಹೀಗೆ ಹೇಳಿದ ಮನುಷ್ಯನು ಹೇಗಿದ್ದನು ಎಂದು ಕೇಳಿದನು (ವಚನಗಳು 6, 7).

ಅವರು, "ಆತನೊಬ್ಬ ರೋಮಗಳುಳ್ಳ[8] ವ್ಯಕ್ತಿಯಾಗಿದ್ದು ಸೊಂಟಕ್ಕೆ ಪ್ರಾಣಿಯ ಚರ್ಮದ ನಡಕಟ್ಟನ್ನು ಕಟ್ಟಿಕೊಂಡವನೂ" ಆಗಿದ್ದನು ಎಂದು ಅವರು ಉತ್ತರಿಸಿದರು. ಆತನು ಯಾರು

ಎಂದು ಅವರು ತಿಳಿದಿದ್ದಾದರೆ ಅವರು ಸಮಯೋಚಿತವಾಗಿ ಆತನು ಮೂಗನಾಗಿರಬೇಕೆಂದು ಯೋಚಿಸಿದರು. ಆಗ ಅಹಜ್ಯನು "ಆತನು ತಿಷ್ಬೀಯನಾದ ಎಲೀಯನು" ಎಂದು ಹೇಳಿದನು (ವಚನ 8). ಅದಕ್ಕೆ ಇನ್ನೊಂದನ್ನು ಜೋಡಿಸುತ್ತಾ "ಹೀಗೆ ಆ ಮುದಿ ಕತ್ತೆಯು ಇನ್ನೂ ಸುತ್ತಲೂ ಸುತ್ತುತ್ತಾ ಇದ್ದಾನೆಯೇ. ಐದು ವರ್ಷಗಳಿಂದಲೂ ನಾನು ಆತನ ಬಗೆಗೆ ಕೇಳಿರಲಿಲ್ಲ. ಆತನು ಸತ್ತಿರಬಹುದು ಎಂದು ನಾನು ಯೋಚಿಸಿದ್ದೆ. ಆದರೆ ಇಲ್ಲಿ ಮತ್ತೆ ಇದ್ದಾನೆಯೇ ನಾವು ಲಕ್ಷೀಕರಿಸಿದ ಸಂಗತಿಗಳಲ್ಲಿ ತನ್ನ ಮೂಗು ತೂರಿಸುತ್ತಿದ್ದಾನೆಯೇ" ಎಂದು ಹೇಳಿದನು.

ಇದು ಅಹಜ್ಯನಿಗೆ ಪಶ್ಚಾತ್ತಾಪಪಡಲು ದೇವರು ಕೊಟ್ಟ ಇನ್ನೊಂದು ಅವಕಾಶವಾಗಿತ್ತು. ದೇವರ ದೂತನು ದೇವರ ಸಂದೇಶವನ್ನು ಕಳುಹಿಸಿದನು, ಮತ್ತು ಸಂದೇಶದ ಹೆಚ್ಚಾದ ಎಲ್ಲಾ ವಿಷಯದಲ್ಲಿಯೂ ಭಯಂಕರ ಮರಣದ ಬಗೆಗೆ ಸಂಬಂಧಿತವಾಗಿತ್ತು. ಒಬ್ಬ ಮನುಷ್ಯನನ್ನು ನಿಲ್ಲಿಸಿ ಮತ್ತು ವಿಚಾರ ಮಾಡುವಂತೆ ಹಚ್ಚದೇ ಹೋದರೇ ಏನೂ ಆಗದು. ಇದು ಈ ಸಮಯದಲ್ಲಿ ಅಷ್ಟೊಂದು ಪರಿಣಾಮ ಬೀರಲಿಲ್ಲ. ನಿಜವಾಗಿ, ಇದು ಅಹಜ್ಯನನ್ನು ಸಿಟ್ಟಿಗೇಳುವಂತೆ ಮಾಡಿತು. "ಆಗ ಅರಸನು ಎಲೀಯನನ್ನು ಕರೆತರುವುದಕ್ಕಾಗಿ ಪಂಚಾಶದಧಿಪತಿಯನ್ನು ಅವನ (ಅಧಿಪತಿಯು) ಐವತ್ತು ಮಂದಿ ಸಿಪಾಯಿಗಳೊಡನೆ ಕಳುಹಿಸಿದನು" (ವಚನ 9ಎ). ಅರಸನು "ಯಾರೋ ಒಬ್ಬರು ಸತ್ತಿದ್ದಾರೆ" ಆದರೆ "ಅದು ನಾನಲ್ಲ ಎಂದು ಹೇಳಿದನು!"

## ಉತ್ತರದ ಇಸ್ರಾಯೇಲಿನ ಬಲಯುತವಾದ ಪ್ರವಾದನೆ (1:9-17)

ಅವರು ವೃದ್ಧನಾದ ಎಲೀಯನನ್ನು ಕಂಡಾಗ "ಆತನು ಬೆಟ್ಟದ ತುದಿಯಲ್ಲಿ ಕೂತಿದ್ದನು" (ವಚನ 9ಬಿ). ಆತನು "ವೃದ್ಧನಾದ ಎಲೀಯನಾಗಿದ್ದನು" ಯಾಕೆಂದರೆ ವರುಷಗಳು ಕಳೆದು ಹೋಗಿದ್ದವು. ಆತನು ಈಜಬೇಲ ಮತ್ತು ಆಹಾಬರೊಡನೆ ಇಪ್ಪತ್ತು ಅದಕ್ಕಿಂತ ಹೆಚ್ಚು ವರುಷ ಯುದ್ಧಸಾರಿದ್ದನು. ಈಗ ಇದು ಈಜಬೇಲಳು ಮತ್ತವಳ ಮಗನಾದ ಅಹಜ್ಯನ ಸರದಿಯಾಗಿತ್ತು. ಎಲೀಯನು ವೃದ್ಧನಾದನು. ಬೂದು ಬಣ್ಣವು ಚಿರಪರಿಚಿತವಾದ ಕಾಡುತಲೆಕೂದಲಿಗೆ ಮತ್ತು ಗಡ್ಡಕ್ಕೆ ಗೀಚಿದಂತಿತ್ತು. ಆತನಿಗೆ ನೆಟ್ಟಗೆ ನಿಲ್ಲಲು ಆಗುತ್ತಿರಲಿಲ್ಲ. ಆತನು ಈಗ ಬಹುಶಃ ಅರಸನ ರಥದ ಮುಂದೆ ಓಡಲಾರನು. ಆತನೊಬ್ಬ ವೃದ್ಧ ಮನುಷ್ಯನಾಗಿದ್ದು, ಈ ಜಗತ್ತನ್ನು ಬಿಡುವುದಕ್ಕೆ ಸಿದ್ಧನಾಗಿದ್ದುಕೊಂಡು ಗುಡ್ಡದ ಮೇಲೆ ಕೂತುಕೊಂಡಿದ್ದನು (ಅಧ್ಯಾಯ 2ನ್ನು ನೋಡಿರಿ). ಆತನ ಬಗೆಗೆ ದುಃಖಪಡದಿರಿ. ಆತನು ಇನ್ನೂ ಶಕ್ತಿಯುತವಾದ ಪ್ರವಾದಿಯಾಗಿದ್ದಾನೆ. ಆತನು ಇನ್ನೂ ಇಸ್ರಾಯೇಲಿನಲ್ಲಿನ "ದೇವರ ಮನುಷ್ಯನಾಗಿದ್ದಾನೆ" ಆತನು ಇನ್ನೂ ದೇವರ "ಒಬ್ಬನೇ ಸೈನಿಕನಾಗಿದ್ದಾನೆ" (ಒನ್ ಮ್ಯಾನ್ ಆರ್ಮಿ) ಆತನು ಇನ್ನೂ ಬೆಂಕಿಯ ಮನುಷ್ಯನಾಗಿದ್ದಾನೆ.

ಇಸ್ರಾಯೇಲಿನ ಉತ್ತರದ ಪ್ರವಾದಿಯ ಮೂರು ಗುಣಗಳನ್ನು ನಾವು ಗಮನಿಸುವಾ.

*ನಾವು ಇಲ್ಲಿ ನೋಡುವಂತೆ ಎಲೀಯನು ದೇವರ,* ಚಿತ್ತವನ್ನು ತಿಳಿದುಕೊಳ್ಳುವಂತೆ ಮಾಡಿದನು. ಆ ಸಮಯದಲ್ಲಿ ಎಲೀಯನು ಎಲ್ಲಿ ವಾಸಿಸುತ್ತಿದ್ದನು ಎಂಬುದು ನಮಗೆ ತಿಳಿಯದು, ಆದರೆ ದೇವರು ಆತನೊಡನೆ ಮಾತನಾಡಿದಾಗ ಆತನು ಹೋಗಲು ಸಿದ್ಧನಾದನು. ದೇವರ ದೂತನು ಬಂದನು ಮತ್ತು ಬಿಡುಗಡೆಮಾಡಲಿರುವ ಸಂದೇಶವನ್ನು ಕೊಟ್ಟನು. ಎಲೀಯನು ಅದನ್ನು ಬಿಡುಗಡೆ ಮಾಡಿದನು. ಅದು ಆತನ ಜೀವಿತವನ್ನು ಸಾರಾಂಷೀಕರಿಸುವುದಾಗಿದೆ.

*ಎಲೀಯನು ದೇವರ ಕೆಲಸವನ್ನು ಮಾಡಿದನು:*

> ಅವನಿಗೆ (ಎಲೀಯನಿಗೆ) ದೇವರ ಮನುಷ್ಯನೇ,[9] ಇಳಿದು ಬಾ; ಅರಸನು ನಿನ್ನನ್ನು ಕರೆಯುತ್ತಾನೆ ಎಂದು (ಅಧಿಪತಿಯು) ಹೇಳಿದನು. ಅದಕ್ಕೆ ಎಲೀಯನು, "ನಾನು ದೇವರ ಮನುಷ್ಯನಾಗಿರುವುದಾದರೆ ಆಕಾಶದಿಂದ ಬೆಂಕಿಬಿದ್ದು ನಿನ್ನನ್ನೂ ನಿನ್ನ ಐವತ್ತು ಮಂದಿ

> ಸಿಪಾಯಿಗಳನ್ನೂ ದಹಿಸಬಿಡಲಿ" ಅಂದನು. ಕೂಡಲೇ ಆಕಾಶದಿಂದ ಬೆಂಕಿ ಬಿದ್ದು ಅವನನ್ನೂ ಅವನ ಐವತ್ತು ಮಂದಿ ಸಿಪಾಯಿಗಳನ್ನೂ ದಹಿಸಿಬಿಟ್ಟಿತು (ವಚನಗಳು 9ಸಿ, 10).

ಬೆಂಕಿಯು ಕರ್ಮೆಲ್ ಬೆಟ್ಟದಲ್ಲಿ ಬಂದಂತೆಯೇ ಪುನಃ ಪರಲೋಕದಿಂದ ಬೆಂಕಿಯು ಇಳಿದು ಬಂದಿತು. ವೃದ್ಧ ಮನುಷ್ಯನು ಇನ್ನೂ ಆ ಸ್ಪರ್ಷವನ್ನು ಹೊಂದಿದ್ದನು! ಜೋಸ್ಪಸ್‌ನು ಬೆಂಕಿಯು ಮಿಂಚುತ್ತಿತ್ತು[10] ಎಂದು ಹೇಳುತ್ತಾನೆ, ಅದು ಏನೇ ಆಗಿರಲಿ, ಇದು ಭೂಮಿಯ ಮೇಲೆ ಐವತ್ತೊಂದು ಸುಟ್ಟ ಕಲೆಗಳನ್ನು ಬಿಟ್ಟಿತು, ಆ ಸುಟ್ಟಕಲೆಯು ಅಲ್ಲಿ ಇದ್ದಂತಹ ಮನುಷ್ಯರದ್ದಾಗಿತ್ತು.

ಅರಸನು ಈ ಮುಖಾಂತರ ತಾನು ಕಲಿಯಬೇಕಾಗಿದ್ದಗಿದ್ದಂತಹ ಪಾಠವನ್ನು ಕಲಿತನೇ? ಇಲ್ಲ, ಆತನು ಇನ್ನೂ ಐವತ್ತೊಂದು ಜನರನ್ನು ಅಲ್ಲಿಗೆ ಕಳುಹಿಸಿದನು. (ಆತನು ಸಾಲಿನ ಹಿಂದೆ ನಿಂತು, ತನ್ನ ಸೈನಿಕದಳವನ್ನು ಕಳಿಸುತ್ತಾ ಇದ್ದು ಜೋರಾಗಿ "ನಾವು ಕಡೆಯ ಮನುಷ್ಯನವರೆಗೂ ಹೋರಾಡುವವರಾಗಿದ್ದೇವೆ" ಎಂದು ಆರ್ಭಟಿಸುವ ಒಬ್ಬ ಧೈರ್ಯವಂತ ಸೇನಾಪತಿಯಂತಿದ್ದನು!)

ಪ್ರವಾದಿಯ ಬಳಿಗೆ ಬಂದ ಅಧಿಪತಿಯ ಚಿತ್ರಣವನ್ನು ನಿಮ್ಮ ಮನದಲ್ಲಿ ಮನನ ಮಾಡಿಕೊಳ್ಳಿರಿ. ಆತನು ಉತ್ಸಾಹಪೂರಿತನಾಗಿ ಹೆಜ್ಜೆಹಾಕುತ್ತಿದ್ದಾನೆ. "ಓ ದೇವರ ಮನುಷ್ಯನೇ, ಬೇಗನೇ ಇಳಿದು ಬಾ; ಅರಸನು ನಿನ್ನನ್ನು ಕರೆಯುತ್ತಾನೆ" (ವಚನ 11) ಬಹುಶಃ ಹೀಗೆ ಆತನು ಬೇಡುವ ಮುನ್ನ ಏದುಸಿರು ಬಿಟ್ಟಿರಬಹುದು. ಇಲ್ಲಿ ಸೇರಿಸಲ್ಪಟ್ಟಂತಹ "ಬೇಗನೇ" ಎಂಬ ಶಬ್ಧವನ್ನು ಗಮನಿಸಿರಿ. ಅಧಿಪತಿಯು "ಅರಸನು ಬೇಕಾದಷ್ಟು ಮೂರ್ಖತನವನ್ನು ಹೊಂದಿದ್ದಾನೆ!" "ಒಂದು ಸಾರಿಯಾದರೂ ಕೆಳಗೆ ಬಾ!" ಎಂದು ಅಧಿಪತಿಯು ಹೇಳಿದನು.

> ಆಗ ಎಲೀಯನು ಅವನಿಗೆ - ನಾನು ದೇವರ ಮನುಷ್ಯನಾಗಿರುವುದಾದರೆ ಆಕಾಶದಿಂದ ಬೆಂಕಿಬಿದ್ದು ನಿನ್ನನ್ನೂ ನಿನ್ನ ಐವತ್ತು ಮಂದಿ ಸಿಪಾಯಿಗಳನ್ನೂ ದಹಿಸಿಬಿಡಲಿ ಎಂದನು. ಕೂಡಲೇ ದೇವರು ಆಕಾಶದಿಂದ ಕಳುಹಿಸಿದ ಬೆಂಕಿಯು ಬಂದು ಅವನನ್ನೂ ಅವನ ಐವತ್ತು ಮಂದಿ ಸಿಪಾಯಿಗಳನ್ನೂ ಸುಟ್ಟುಬಿಟ್ಟಿತು (ವಚನ 12).

"*ದೇವರು* ಆಕಾಶದಿಂದ ಕಳುಹಿಸಿದ ಬೆಂಕಿಯು ಬಂದು" ಇಲ್ಲಿನ ಹೆಚ್ಚುವರಿ ಮಾಹಿತಿಯನ್ನು ಗಮನಿಸಿರಿ. ಬಾಳನ 450 ಪ್ರವಾದಿಗಳನ್ನು ಕೊಂದದ್ದಕ್ಕಾಗಿ ಅದರೊಡನೆ ವಿಶೇಷವಾಗಿ ಈ 102 ಸೈನಿಕರ ಮರಣಕ್ಕೋಸ್ಕರ ಬರಹಗಾರರು ಅನೇಕ ಸಾರಿ ಎಲೀಯನನ್ನು ದೂಷಿಸುವವರಾಗಿರುತ್ತಾರೆ. "ಏನೇ ಇರಲಿ ಅವರು ಕೇವಲ ಆಜ್ಞಾಧಾರಕ ಸೇವಕರುಗಳು" ಎಂದು ಒಬ್ಬರು ಹೇಳುತ್ತಾರೆ. ಇಲ್ಲಿ ಗಮನಿಸಬೇಕಾದ ಒಂದು ಸಂಗತಿ ಎಂದರೆ ಬೆಂಕಿಯನ್ನು ಎಲೀಯನು ಪರಲೋಕದಿಂದ ತಂದ ಬೆಂಕಿಯಾಗಿರಲಿಲ್ಲ ಆದರೆ ದೇವರ ಬೆಂಕಿಯಾಗಿತ್ತು. ದೇವರ ಮೇಲೆ ದೋಷಾರೋಪಣೆ ಮಾಡುವ ಪ್ರಯತ್ನವನ್ನು ಮಾಡುತ್ತಿಲ್ಲ. ಎಲೀಯನು *ದೇವರ* ಕೆಲಸವನ್ನು ಮಾಡುತ್ತಿದ್ದಾನೆ.

ಹಿಂದಿನ ಪಾಠವು ದೇವರು ಮೂರ್ತಿಪೂಜೆಯ ಮತ್ತು ಮೂರ್ತಿಪೂಜೆಗೆ ಸಂಬಂಧಿಸಿದ ಎಲ್ಲವನ್ನೂ ದ್ವೇಷಿಸುವವನಾಗಿದ್ದಾನೆ ಎಂಬುದನ್ನು ಒತ್ತಿಹೇಳಿತ್ತು, ಯೆಹೂದಿಗಳು ಆತನ ವಿಶೇಷ ಜನರಾಗಿದ್ದಾರೆ. ಯಾವುದೆ ಗುಂಪು ಸುಳ್ಳು ದೇವರ ಆರಾಧನೆಯಿಂದ ಸ್ವತಂತ್ರ್ಯರಾಗುವ ಹಾಗಿದ್ದರೆ, ಅದು ಇಸ್ರಾಯೇಲ್ಯರ ಗುಂಪಾಗಿರುತ್ತಿತ್ತು. ಮೂರ್ತಿ ಪೂಜೆಯು ಉತ್ತರ ರಾಜ್ಯದಲ್ಲಿ ಯೆರೋಬ್ಬಾಮನ ಪ್ರಭಾವದಿಂದ ಬಂದಿತು ಮತ್ತು ಹರಡುತ್ತಾ ಮುಂಂದುವರೆಯಿತು. ಕೊನೆಯ ಕಡ್ಡಿಯು (ಪಾನೀಯವನ್ನು ಹೀರುವದಕ್ಕಾಗಿರುವ ಮೃದುವಾದ ನಳಿಗೆ) ಈಜಬೆಲಳು ರಾಣಿಯಾದಾಗ ಬಂದಿತು ಮತ್ತು ಬಾಳನ ಹಾಗೂ ಆಶೇರು (ಬಾಳನ ಸಂಗಾತಿಯಾದ ಹೆಣ್ಣು ದೇವತೆ) ದೇವರುಗಳ ಆರಾಧನೆಯೂ ಕೂಡಾ ಪರಿಚಯಿಸಲ್ಪಟ್ಟಿತು. ಈಜಬೆಲಳು ಬಾಳನ

ಮತ್ತು ಯೆಹೋವ ದೇವರ ಆರಾಧನೆಯು ಸಮಾನವಾಗಿ ನಡೆದುಕೊಂಡು ಹೋಗುವುದಕ್ಕೆ ಒಪ್ಪಿಗೆ ಕೊಡಲು ಬಯಸುವವಳಾಗಿರಲಿಲ್ಲ. ಅವಳು ಯೆಹೋವನ ಆರಾಧನೆಯನ್ನು ಈ ಭೂಮಿಯಿಂದ ತೆಗೆದುಹಾಕುವ ಮೂಲಕ ತನ್ನ ಗುರಿಯನ್ನು ಸಾಧಿಸಿದಳು.

ಭಯಂಕರವಾದ ಹುಣ್ಣು ಈ ಭೂಮಿಯ ಮೇಲೆ ಬಂದಿತು. ಈಜಬೆಲಳು ಮತ್ತವಳ ದಾಸಿಯರೂ ಬಲು ನಾಚಿಕೆಗೇಡಿನ ಕೃತ್ಯವಾದ ಅನೈತಿಕವಾದ ಕಾರ್ಯಗಳನ್ನು ಅಶೇರು (ಅಸ್ತೊತ್ರ) ದೇವಾಲಯದ ಅಂಶಗಳಲ್ಲಿ ಕಂಡುಬರುತ್ತದೆ. ದೇವಾಲಯದ ಪ್ರವೇಶದ ಕೆಲವೆ ಹೆಜ್ಜೆಗಳ ದೂರದಲ್ಲಿ, ಅಲ್ಲೊಂದು ಸಮಾಧಿಯು ಇದೆ. ಈ ಸಮಾಧಿಯು ಹೂಜಿ, ಜಾಡಿಗಳಿಂದ ತುಂಬಿಸಲ್ಪಟ್ಟಿತ್ತು. ಇದು ಶಿಶುಗಳನ್ನು ಬಲಿಕೊಡುವುದನ್ನು ಉಳಿಸಿಕೊಂಡು ಬಂದಿರುವ ದೇವಾಲಯ ಇದಾಗಿತ್ತು. ಬಾಳ ಮತ್ತು ಅಶೇರುಗಳ ಪೂಜಾರಿ ಮತ್ತು ಪೂಜಾರಿಣಿಯರು ಚಿಕ್ಕ ಮಕ್ಕಳನ್ನು ಕೊಲೆಗೈಯುತ್ತಿದ್ದರು.

ದೇವರು ಎಲೀಯನನ್ನು ಈ ಕ್ಯಾನ್ಸರ್ ಹುಣ್ಣನ್ನು ತೆಗೆಯಲು ಕಳುಹಿಸಿದನು. ಮೊದಲೇ ಗಮನಿಸಿದಂತೆ, ಒಬ್ಬ ಮನುಷ್ಯನು ಈಗಾಗಲೇ ತನ್ನ ಹೊಟ್ಟೆಯಲ್ಲಿ ಭರದಿಂದ ಬೆಳೆಯುತ್ತಿರುವ ಆ ಗಡ್ಡೆಯನ್ನು ಹೊಂದಿದ್ದಾನೆ ಎಂದು ವೈದ್ಯರು ಹೇಳಿದ್ದಾದರೆ, ಆತನು "ನಾವು ಚಿಕ್ಕ ಶಸ್ತ್ರಚಿಕಿತ್ಸೆಯು ಮಾತ್ರ ಸಾಕು ಮತ್ತು ಮುಂದೇನಾಗುತ್ತದೆ ಎಂದು ನೋಡೋಣ" ಎಂದು ಹೇಳುವುದಿಲ್ಲ! ಇಲ್ಲ ವೈದ್ಯರು ಎಲ್ಲಾ ಗಡ್ಡೆಯನ್ನು ಅದರೊಡನೆ ಅದರ ಸುತ್ತಲು ಬೆಳೆದಿರುವ ತೊಂದರೆ ಮಾಡಬಹುದಾದ ಎಳೆಗಳನ್ನೂ ಆತನು ತೆಗೆಯುತ್ತಾನೆ - ಮತ್ತು ಆತನು ಎಲ್ಲವನ್ನು ಪಡೆಯುವಂತೆ ಪ್ರಾರ್ಥಿಸುತ್ತಾನೆ.

ನಿಯಮದ ಪ್ರಕಾರ, ಮೂರ್ತಿಪೂಜಕರನ್ನು, ವಿಶೇಷವಾಗಿ ಅವರ ನಾಯಕರನ್ನು ಕೊಲ್ಲುವದು, ಅರಸನ ಜವಾಬ್ದಾರಿಯಾಗಿದೆ. ಅರಸನಾದ ಆಹಾಬನು ತನ್ನ ಕಾರ್ಯವನ್ನು ಮಾಡದಿದ್ದಾಗ, ದೇವರು ಎಲೀಯನನ್ನು ಕಳುಹಿಸಿದನು.

2 ಅರಸು 1ರ ಪ್ರಕರಣದಲ್ಲಿ ಇನ್ನೊಂದು ವಿರೋಧವನ್ನು ಎಬ್ಬಿಸಿತು: "ಆದರೆ ಈ ಜನರು ಆಜ್ಞೆಗಳನ್ನು ನಡೆಸುವವರಾಗಿದ್ದರು. ಅವರು ವೈಯಕ್ತಿಕವಾಗಿ ಜವಾಬ್ದಾರರಾಗಿರಲಿಲ್ಲ." ಈ ಸಮರ್ಥನೆಗೆ ಅಲ್ಪ ಮಟ್ಟಿನ ಮೌಲ್ಯವಿದೆ. ಅದು ಮನುಷ್ಯರ ಜೊತೆದುಷ್ಟವಾದ ಪ್ರಯೋಗ ಗಳನ್ನು ಮಾಡಿದ ನಾಝಿಮಿಲಟರಿ ಪಡೆಯ ವಿಜ್ಞಾನಿಗಳ ಸಮರ್ಥನೆ ಅದಾಗಿತ್ತು. ಜಗತ್ತಿನ ನ್ಯಾಯಾಲಯಗಳು ಮಿಲಿಟರಿ ಪಡೆಗಳ ಆಜ್ಞೆಗಳ ಮೇಲೆ ನಿಯಂತ್ರಣವನ್ನು ತರುವ ನಿಟ್ಟಿನಲ್ಲಿ ನಾಗರೀಕತೆಯಲ್ಲಿ ಮೂಲತಹವಾದ ನೈತಿಕ ಗುರುತನ್ನು ಕಟ್ಟಬೇಕೆಂದು ಆಜ್ಞೆಮಾಡಿದವು.

> (ಅಹಜ್ಯನಿಂದ ಕಳಿಸಲ್ಪಟ್ಟ ಜನರು) ಏನನ್ನು ಮಾಡಬೇಕಾಗಿತ್ತು? ನಾಬಲನ ಪೂಜಾರಿಗಳನ್ನು ಸಂಹರಿಸಲು ಆಜ್ಞೆಯು ಕೊಡಲ್ಪಟ್ಟಾಗ, ಅವರು ಆ ಆಜ್ಞೆಯು ದೇವರ ಚಿತ್ತಕ್ಕೆ ಪ್ರತಿಕೂಲವಿದೆ ಎಂಬುದನ್ನು ತಿಳಿದಾಗಲೂ ಅದಕ್ಕೆ ವಿಧೇಯರಾಗುವುದನ್ನು ತಿರಸ್ಕರಿಸಿದ ಸೌಲನ ಕಾವಲುಗಾರರಂತೆ ಕಾರ್ಯಮಾಡುತ್ತಿದ್ದಾರೆ!
>
> ಅಧಿಕಾರಿಗಳು ಮತ್ತು ಸೈನಿಕರು ತಮ್ಮ ನಾಯಕರು ಮತ್ತು ಅರಸರು ಕೊಡುವ ಆಜ್ಞೆಗಳು ದೇವರ ದೃಷ್ಟಿಯಲ್ಲಿ ಪಾಪಮಯವಾದುದ್ದು ಮತ್ತು ದುಷ್ಟಮಯವಾದುದ್ದು ಎಂಬುದಾಗಿ ಸಮಜಾಯಿಸದೇ ಅವುಗಳಿಗೆ ವಿಧೇಯರಾಗುವುದನ್ನು ಕಲಿಯುವವರಂತಿರುತ್ತಾರೆ.[11]

ಇಸ್ರಾಯೇಲು ದೈವಿಕತೆಯ ಮೇಲೆ ಇಡುವಂತದ್ದಾಗಿತ್ತು ಎಂಬುದನ್ನು ಮನದಲ್ಲಿ ಇಟ್ಟುಕೊಳ್ಳಿರಿ. ಯೆಹೋವನು ಇಸ್ರಾಯೇಲ್ಯರ ಸುಸಜ್ಜಿತ ಸೈನ್ಯಕ್ಕೆ ಸೈನ್ಯಾಧಿಪತಿಯಾಗಿದ್ದನು. ಆತನಿಂದ ಬಂದ ಯಾವುದೇ ಆಜ್ಞೆಯನ್ನು ಅಲ್ಲಿರುವ ಇತರ ಅಧಿಕಾರಿಗಳು (ಅರಸನನ್ನು ಒಳಗೊಂಡು) ಮಾನ್ಯತೆ ಎಂದು ತೆಗೆದುಕೊಳ್ಳಬೇಕು. ಸುಸಜ್ಜಿತ ಇಸ್ರಾಯೇಲ್ಯರು ದೇವರ ಪ್ರವಾದಿಯನ್ನು "ಜೀವಂತವಾಗಲೀ ಶವವಾಗಲೀ" ತರಲು ಬಂದವರು ಆಗಿದ್ದು

ಇವುಗಳ ಬಗೆಗೆ ಯಾವುದೇ ಖಚಿಚಿತ್ತವಾದ ಎಚ್ಚರಿಕೆಯಿಲ್ಲದವರೂ ಆಗಿದ್ದರು. ಎಲೀಯನು ಮುಗ್ಧಜನರನ್ನು ಕೊಂದು ಹಾಕುವವನಾಗಿರಲಿಲ್ಲ; ಆತನು ನರಕವಾದಂತ ಸೈನ್ಯದ ಗುಂಪಿಗೆ ವಿರುದ್ಧ ವಾಗಿ ನಿಂತನು ಮತ್ತು ದೇವರ ಶಕ್ತಿ ಮತ್ತು ಬಲದೊಡನೆ ವಿಜಯದೊಡನೆ ನಿಂತನು.

ಅಂತಿಮವಾಗಿ ಸೂಕ್ಷ್ಮಗ್ರಾಹಿ ಸೇನಾಪತಿಯು ವಚನ 13ರಲ್ಲಿ ಕಂಡು ಬರುತ್ತಾನೆ. "ಅರಸನು ಮತ್ತೊಬ್ಬ ಪಂಚಾಶದಧಿಪತಿಯನ್ನು ಅವನ ಐವತ್ತು ಮಂದಿ ಸಿಪಾಯಿಗಳೊಡನೆ ಕಳುಹಿಸಿದನು" ಈ ಸೇನಾಪತಿಯು 102 ಸೈನಿಕರು ಸುಟ್ಟು ಇದ್ದಿಲುಗಳಾಗಿದ್ದಂತಹ ಮಾರ್ಗದಲ್ಲಿ ಜಾಗರೂಕತೆಯಿಂದ ನಡೆಯುತ್ತಾ ದೇವರ ಶಕ್ತಿಯನ್ನು ನೆನಪಿಸಿಕೊಳ್ಳುತ್ತಾ ಸಾಗಿದ್ದನು. ಆತನು ಎಲೀಯನನ್ನು ತಲುಪಿದೊಡನೆಯೇ ಆತನಿಗೆ ಅಡ್ಡಬಿದ್ದನು ಮತ್ತು ಹೀಗೆ ಹೇಳಿದನು:

> "ದೇವರ ಮನುಷ್ಯನೇ ನನ್ನ ಮತ್ತು ನಿನ್ನ ಸೇವಕರಾದ ಈ ಐವತ್ತು ಮಂದಿಯ ಪ್ರಾಣವು ನಿನ್ನ ದೃಷ್ಟಿಯಲ್ಲಿ ಬೆಲೆಯುಳ್ಳದ್ದಾಗಿರಲಿ ಆಕಾಶದಿಂದ ಬೆಂಕಿ ಬಿದ್ದುಮುಂಚೆ ಬಂದ ಪಂಚಾದಶಧಿಪತಿಗಳನ್ನೂ ಅವರ ಸಿಪಾಯಿಗಳನ್ನೂ ದಹಿಸಿಬಿಟ್ಟಿತಲ್ಲಾ; ನನ್ನ ಪ್ರಾಣವಾದರೋ ನಿನ್ನ ದೃಷ್ಟಿಯಲ್ಲಿ ಬೆಲೆಯುಳ್ಳದ್ದೆಂದು ಎಣಿಸಲ್ಪಡಲಿ" (ವಚನಗಳು 13ಬಿ, 14).

"ನನ್ನ ಪ್ರಾಣವಾದರೋ ನಿನ್ನ ದೃಷ್ಟಿಯಲ್ಲಿ ಬೆಲೆಯುಳ್ಳದ್ದು ಎಣಿಸಲ್ಪಡಲಿ" ಇದರ ಅರ್ಥವು "ನನ್ನ ಜೀವವನ್ನು ಉಳಿಸು" ಎಂದಾಗಿದೆ.

"ಮತ್ತು ಯೆಹೋವನ ದೂತನು ಎಲೀಯನಿಗೆ - ನೀನು ಇವನ ಸಂಗಡ ಹೋಗು; ಇವನಿಗೆ ಹೆದರಬೇಡ" ಎಂದು ಹೇಳಿದ್ದರಿಂದ ಅವನು ಎದ್ದು ಇವನ ಜೊತೆಯಲ್ಲಿ ಅರಸನ ಬಳಿಗೆ ಹೋದನು (ವಚನ 15). ಎಲೀಯನು ಸರಪಣಿಯಿಂದ ಕಟ್ಟಲ್ಪಟ್ಟಿದ್ದನೋ ಅಥವಾ ಸೈನಿಕರಿಂದ ಮಿತಿಗೆ ಒಳಪಟ್ಟಿದ್ದನೋ? ಎಂಬುದರಲ್ಲಿ ನನಗೆ ಸಂಶಯವಿದೆ, ಆತನು ಅವರೊಡನೆ ಸಾಗಿದ್ದನ್ನು ಹೀಗೆ ಚಿತ್ರಿಕರಿಸಬಹುದು ಆತನು ಮುಂದೆ ನಡೆಯುತ್ತಿದ್ದಾನೆ ಐವತ್ತೊಂದು ಮಂದಿ ಸಿಪಾಯಿಗಳು ಗೌರವಪೂರಕವಾದ ಅಂತರವನ್ನು ಬಿಟ್ಟು ಆತನನ್ನು ಅನುಸರಿಸುತ್ತಿದ್ದಾರೆ.

*ಎಲೀಯನು ದೇವರ ವಾಕ್ಯವನ್ನು ದೃಢಿಕರಿಸಿದನು:*

> "ನೀನು ಎಕ್ರೋನಿನ ದೇವರಾದ ಬಾಳ್ಜೆಬೂಬನನ್ನು ವಿಚಾರಿಸುವುದಕ್ಕೆ ದೂತರನ್ನು ಕಳಿಸಿದ್ದೇನು? ಅಂಥ ವಿಚಾರಮಾಡುವುದಕ್ಕೆ ಇಸ್ರಾಯೇಲ್ಯರಲ್ಲಿ ದೇವರಿಲ್ಲವೋ? ನೀನು ಹೀಗೆ ಮಾಡಿದ್ದರಿಂದ ಹತ್ತಿದ ಮಂಚದಿಂದಿಳಿಯದೆ ಸಾಯಲೇಬೇಕು ಎಂಬದಾಗಿ ಯೆಹೋವನು ಅನ್ನುತ್ತಾನೆ" (ವಚನ 16).

ಈ ಸಂದೇಶವು ದೂತನು ಕೊಟ್ಟಿರುವ ಸಂದೇಶವೆ ಆಗಿದೆ. ದೇವರು ಎಲೀಯನಿಗೆ ಹೇಳಿ ದನು. ಎಲೀಯನು ದೂತನಿಗೆ ಹೇಳಿದನು. ದೂತನು ಅರಸನಿಗೆ ಹೇಳಿದನು. ಈಗ ಎಲೀಯನು ಅರಸನಿಗೆ ಹೇಳುತ್ತಿದ್ದಾನೆ. ಅದೇ ತರಹದ್ದನ್ನು ಇದು ನೆನಪಿಸುವಂತದ್ದಾಗಿದೆ. ದೇವರ ಮಾತುಗಳು ಬದಲಾಗವು.

ಎಲೀಯನು ಈ ಸಂದೇಶವನ್ನು ತಿಳಿದನು ಮತ್ತು ಬಾಗಿಲನ ಕಡೆಗೆ ನಡೆದನು. ಆತನ ಸಾರ್ವಜನಿಕ ಜೀವನವು ಮುಗಿಯಿತು. ಇದು ಆಹಾಬ ಈಜಬೆಲರೊಡನೆ ಕಡೆಯ ಸಂಪರ್ಕ ಆಗಿತ್ತು. ಎಂಟು ಅಧ್ಯಾಯಗಳ ನಂತರ, ಯೇಹು ಈಜಬೆಲಳನ್ನು ಕೊಲ್ಲುತ್ತಾನೆ ಮತ್ತು ಆಹಾಬನ ಮನೆಯನ್ನು ನಾಶಮಾಡುತ್ತಾನೆ ಆದರೆ ಎಲೀಯನು ದೇವರು ಆತನಿಗೇನನ್ನು ಮಾಡಲು ಕೊಟ್ಟಿದ್ದನೋ ಅದನ್ನು ಸಂಪೂರ್ಣಗೊಳಿಸಿದನು. ಆತನ ಕೊನೆಯ ಕಾರ್ಯವು

ಮುಗಿಸಲ್ಪಟ್ಟದ್ದಾಗಿತ್ತು. "ದೇವರು ಹೇಳಿದ್ದನ್ನು, ಆತನು ಮಾಡಿದನು."

ನೀವು ದೇವರ ವಾಕ್ಯವನ್ನು ಎಣಿಸುತ್ತೀರಾ? 17ನೇಯ ವಚನದ ಮೊದಲ ಭಾಗವನ್ನು ಗಮನಿಸಿರಿ; "ಯೆಹೋವನು ಎಲೀಯನ ಮುಖಾಂತರವಾಗಿ ಮುಂತಿಳಿಸಿದಂತೆ ಅರಸನು ಸತ್ತನು." ಆಹಾಬನು ತನ್ನ ಮಗನಿಗೆ ಅಹಜ್ಯ ಎಂದು ಹೆಸರಿಟ್ಟಿದ್ದನು, ಇದರ ಅರ್ಥವು ಯೆಹೋವನಿಂದ ಎತ್ತಿಹಿಡಿಯಲ್ಪಟ್ಟವನು ಎಂದು; ಆದರೆ ಅವಿಧೇಯತೆಯಿಂದ ಆತನು "ಯೆಹೋವನಿಂದ ನಾಶಮಾಡುವಂತವನು" ಎಂದಾದನು.

17ನೇಯ ವಚನದ ಕೊನೆಯಲ್ಲಿ ನಮಗೆ ಒಂದು ದುಃಖಪೂರಿತವಾದ ಅಡಿನುಡಿಯು ನಮಗಿದೆ: "ಅವನಿಗೆ ಮಗನಿಲ್ಲದ್ದರಿಂದ ಅವನಿಗೆ ಬದಲಾಗಿ (ಅವನ ತಮ್ಮನಾದ) ಯೆಹೋರಾಮನೆಂಬವನು ಯೆಹೂದ್ಯರ ಅರಸನಾದ ಯೆಹೋಷಾಫಾಟನ ಮಗನಾದ ಯೆಹೋರಾಮನ ಆಳ್ವಿಕೆಯ ಎರಡನೆಯ ವರುಷದಲ್ಲಿ ಅರಸನಾದನು." ಅಹಜ್ಯನು ಮಕ್ಕಳಿಲ್ಲದೆ ಸತ್ತನು, ಹೀಗೆ ಆತನ ಸೋದರನು ಸಿಂಹಾಸನಕ್ಕೆ ಬಂದನು. ಹೀಗೆ ನಾವು ಆಹಾಬನ ಮಗನ ದುಃಖಕರವಾದ ಜೀವತವನ್ನು ಅಲ್ಪಕಾಲಾವಧಿಗೆ ಹಾಳುಮಾಡಿಕೊಂಡ ಕಥೆಯನ್ನು ನಾವು ನೋಡುತ್ತೇವೆ.

## ಆತ್ಮೀಕ ಇಸ್ರಾಯೇಲಿನ ವಿವೇಚನಾಶೀಲ ಶಿಷ್ಯರು

ದೇವರು ಅಸಂತುಷ್ಟವಾದ ಕಥೆಯನ್ನು ಯಾಕೆ ದಾಖಲಿಸಿದ್ದಾನೆ? ದೇವರು ಯಾವ ಪಾಠವನ್ನು ನಮಗೆ ಕೊಡಬೇಕೆಂದಿದ್ದಾನೆ? "ಆತ್ಮೀಕ ಇಸ್ರಾಯೇಲಿನ ವಿವೇಚನಾಶೀಲ ಶಿಷ್ಯರತ್ತ" ನಮ್ಮ ಗಮನವನ್ನು ಹರಿಸುವಾ. "ಆತ್ಮೀಕ ಇಸ್ರಾಯೇಲು" ಇದು ಸಭೆಯನ್ನು ಸೂಚಿಸುವುದಾಗಿದೆ (ಗಲಾತ್ಯ 6:16; ಮುಂತಾದವು). "ಶಿಷ್ಯರು" ಎಂಬುದು ಸಭೆಯ ಸದಸ್ಯರಾದ ಕ್ರೈಸ್ತರನ್ನು (ನೋಡಿರಿ ಅಪೊಸ್ತಲರ ಕೃತ್ಯಗಳು 11:26) ಸೂಚಿಸುವುದಾಗಿದೆ. "ವಿವೇಚನಾಶೀಲ" ಎಂಬ ಪದವು ಅರಿತುಕೊಳ್ಳುವುದಕ್ಕೆ ಸಮರ್ಥರನ್ನಾಗಿಸುವದು, ಪಾಠಗಳನ್ನು ಹುಡುಕುವದು, ಮತ್ತು ಆ ಪಾಠಗಳ ಜೊತೆ ಅವುಗಳಿಗೆ ಅನುಗುಣವಾಗಿ ಜೀವಿಸುವುದು ಎಂಬ ಅರ್ಥವನ್ನು ಕೊಡುವುದಾಗಿದೆ.

ಈ ಘಟನೆಯ ಅನುಕ್ರಮಣಿಕೆಯ ಮೂಲಕ ಕಲ್ಪಿತ ವಾದ ಪಾತ್ರವು ಒಂದೆಡೆ ನಿಂತಿದ್ದು, ಸಂಭವಿಸುವ ಎಲ್ಲಾ ಪಾಠಗಳನ್ನು ಚಿತ್ರಿಸುತ್ತಿದೆ. ಈ ವೀಕ್ಷಕನು ಯಾವ ಪಾಠವನ್ನು ಕಲಿಯಬಹುದು? ಯಾಕೋಬ ಯೋಹಾನರು ನಿಜವಾಗಿ ಕಾಣಿಸಿಕೊಳ್ಳುವಂತಹ ಪಾಠಗಳನ್ನು ಹೊಂದಿದ್ದರು. ಒಂದು ಸಾರಿ ಯೇಸು ಯೆರೂಸಲೇಮಿಗೆ ಹೋಗುವುದಕ್ಕಾಗಿ ಸಿದ್ಧತೆಯನ್ನು ನಡೆಸಿದ್ದಾಗ, ಶಿಷ್ಯರು ಆ ರಾತ್ರಿ ಆತನಿಗೆ ಸಮಾರ್ಯದ ಒಂದು ಹಳ್ಳಿಯಲ್ಲಿ ಉಳಿದುಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತಿದ್ದರು. ಸಮಾರ್ಯದವರು ಇದು ಕೇವಲ ಒಂದು ರಾತ್ರಿಯ ಭೇಟಿ ಎಂದು ತಿಳಿದರು, ಇದರಿಂದ ಅವರು ಅವಮಾನಿತರಾದರು ಮತ್ತು ಆತನನ್ನು ಬರಮಾಡಿಕೊಳ್ಳಲು ಹೋಗಲಿಲ್ಲ. ಇದನ್ನು ಕಂಡು ಯಾಕೋಬ ಯೋಹಾನರು "ಸ್ವಾಮಿ ಆಕಾಶದಿಂದ ಬೆಂಕಿಬಿದ್ದು ಇವರನ್ನು ನಾಶಮಾಡಲಿ ಎಂದು ಹೇಳುವುದಕ್ಕೆ ನಿನಗೆ ಮನಸ್ಸುಂಟೋ" (ಲೂಕ 9:54) ಎಂದು ಕೇಳಿದರು. 2 ಅರಸು 1 ಅವರ ಈ ಸಲಹೆಗೆ ಆಧಾರಭಾಗವಾಗಿರುವುದರಲ್ಲಿ ಯಾವುದೇ ಸಂದೇಶವೂ ಇಲ್ಲ. ಈ ಪಾಠದ ಅಧ್ಯಾಯಗಳು,

> "ಒಬ್ಬನು ತಪ್ಪನ್ನು ಮಾಡಿದರೆ ಆತನನ್ನು ನಾಶಮಾಡಲೇಬೇಕು" ಎಂದಾಗಿದೆ. ಆತನು (ಯೇಸುವು) ತಿರುಗಿಕೊಂಡು ಅವರನ್ನು ಗದರಿಸಿದನು, (ಮತ್ತು ನೀವು ಎಂಥ ಆತ್ಮವನ್ನು ಹೊಂದಿದ್ದೀರಿ ಎಂಬುದು ನಿಮಗೆ ತಿಳಿಯದು; ಮನುಷ್ಯ ಕುಮಾರನಾದ ರೋ ಮನುಷ್ಯರನ್ನು ನಾಶಮಾಡಲೆಂದು ಬರಲಿಲ್ಲ, ಆದರೆ ರಕ್ಷಿಸುವುದಕ್ಕೆ ಬಂದನು ಎಂದನು) ಆಗ ಅವರೆಲ್ಲರೂ ಬೇರೆ ಹಳ್ಳಿಗೆ ಹೋದರು (ಲೂಕ 9:55, 56).

ಇದು ಈ ಕಥೆಯಿಂದ ಚಿತ್ರದಂತಹ ಪಾಠವಲ್ಲ.

ಈ ಘಟನೆಯಿಂದ ನಾವು *ಅನೇಕ* ಪಾಠಗಳನ್ನು ತೆಗೆದುಕೊಳ್ಳಬಹುದಾಗಿದೆ: ಕರ್ತನಲ್ಲಿ ವಿಶ್ವಾಸವಿಡುವವನು ಆತನಿಂದ ರಕ್ಷಿಸಲ್ಪಡುವನು; ಕರ್ತನಿಗಾಗಿ ಬದುಕುವವನು ಜಯವನ್ನು ಹೊಂದುವನು; ಮುಂತಾದವುಗಳು. ಈ ಮೂರು ಪಾಠಗಳ ಮೇಲೆ ನಾವು ಕೇಂದ್ರಿಕರಿಸುವಾ.

*ವಿವೇಚನಾಶೀಲ ಶಿಷ್ಯರು ದೇವರ ವಾಕ್ಯವನ್ನು ಕೇಳಲು ಒಬ್ಬನು ಎಂದಿಗೂ ವೃದ್ಧನಾಗನು ಎಂಬುದಾಗಿ ಕಲಿತರು.* ದೇವರವಾಕ್ಯವು ಎಲೀಯನಿಗೆ ನಿರ್ದೇಶಿಸಲು ಆತನು ಎಂದಿನಂತೆ ಸಿದ್ಧನಾಗಿದ್ದನು.

ನಮ್ಮ ವಯಸ್ಸನ್ನು ಲಕ್ಷಿಸದೇ ನಾವು ಅದಕ್ಕೆ ಪ್ರತಿಕ್ರಯಿಸಲು ಕಾತುಕರಾಗಿರಬೇಕು. ನಾವು ದೇವರ ವಾಕ್ಯವನ್ನು ಅಭ್ಯಸಿಸಲು ಮತ್ತು ಧ್ಯಾನಿಸಲು ಮತ್ತು ಅದಕ್ಕೆ ವಿಧೇಯರಾಗಲು ನಾವು ಸಿದ್ಧರಾಗಿರಬೇಕು.

ಕೆಲವರು ತಮ್ಮ ಮೂಢನಂಬಿಕೆಗಳಿಗಾಗಿ ಎಕ್ರೋನಿನ ಕಡೆ ಹೋಗುತ್ತಾರೆ. ಬಾಳ್ಜೆಬೂಬನ ಪೂಜಾರಿಗಳು ಮೂಲತವಾಗಿ ಭವಿಷ್ಯ ಹೇಳುವ ಕಾಯಕದವರು. ನಾವು ನಮ್ಮ ಭವಿಷ್ಯವನ್ನು ಬೈಬಲಿನಲ್ಲಿ ತಿಳಿದುಕೊಳ್ಳಬೇಕೆಂದು ದೇವರು ಹೇಳುತ್ತಾನೆ, ಆದರೆ ಕೆಲವರಿಗೆ ಇದು ಸಾಲದು. ಇಂದು, ಭವಿಷ್ಯ ಹೇಳುವದು ದೊಡ್ಡ ಕಾಯಕವಾಗಿದ್ದು ನೂರಾರು ವಿಧದ ಹಸ್ತಸಾಮುದ್ರಿಕಾ ಶಾಸ್ತ್ರ ಟಾರೋಟ್ ಕಾರ್ಡ್, ಭವಿಷ್ಯವಾಣಿ, ಓಝಾಬೋರ್ಡ್ ಆತ್ಮಿಕೆಗಳು, ಸೈತಾನತ್ವ ಮುಂತಾದವುಗಳು ಪ್ರಚಲಿತದಲ್ಲಿ ಇವೆ. 10,000 ಕ್ಕಿಂತ ಹೆಚ್ಚು ಪೂರ್ಣವಾಧಿಯ ಭವಿಷ್ಯಕಾರರು. 175,000 ಅರೆಕಾಲಿಕ ಭವಿಷ್ಯಕಾರರು ಇಂದು U.S. ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅನೇಕ ವಾರ್ತಪತ್ರಿಕೆಗಳ ಆ ದಿನದ ಜನ್ಮಕುಂಡಲಿಯನ್ನು ಹೊತ್ತುತರುತ್ತವೆ. ಮತ್ತು ಅನೇಕ ಓದುಗರು ತಮ್ಮ "ರಾಶಿಯನ್ನು" ತಿಳಿದಿರುತ್ತಾರೆ. ಅದರಲ್ಲಿ ಅನೇಕವು "ಮೋಜಿಗಾಗಿ" ಮಾಡುವಂತವುಗಳಾಗಿರುತ್ತವೆ ಮತ್ತು ಇದು ಮಾಂತ್ರಿಕ ಜಗತ್ತಿನೊಡನೆ ಅರಿಯದ ಚೆಲ್ಲಾಟವಾಗಿದೆ (ಬಹಳ ಹಿಂದೆನಲ್ಲಾ, ಓಝಾ ಬೋರ್ಡ್ U.S. ನಲ್ಲಿ ಒಳ್ಳೆಯ ಮಾರಾಟದಲ್ಲಿದ್ದು ಏಕಚಕ್ರಾಧಿಪತ್ಯವನ್ನು ಸ್ಥಾಪಿಸಿತು ಎಂದು ನಾನು ಓದಿದ್ದೆನು).

ಮಂತ್ರದ ಗೊಂಬೆಯೊಡನೆ ನಾವು ಆಡುವಾಗ ನಾವು ಬೆಂಕಿಯೊಡನೆ ಆಡುತ್ತಿದ್ದೇನೆ ಎಂಬುದನ್ನು ಅರಿತುಕೊಳ್ಳಲೇಬೇಕು. ಯಾವುದೇ ಪರಿಣಾಮವನ್ನು ಪ್ರಕಟಿಸಲಿ ಅದು ಮಾನಶಾಸ್ತ್ರೀಯವಾಗಿ ಮತ್ತು ಕಾಕತಾಳೀಯವಾಗಿ ಇರುತ್ತವೆ; ಆದರೆ ನಾವು ಅವುಗಳೊಡನೆ ಪ್ರಯೋಗಮಾಡುವಾಗ, ಅದು ನಾವು ಸೈತಾನನಿಗೆ ಬಾಗಿಲನ್ನು ತೆರೆದಂತೆ ಆಗುತ್ತದೆ. ಎಕ್ರೋನಿನಲ್ಲಿ ಬೆಲ್ಜಬೂಬನ ದೈವವಾಣಿಯ ಬಗೆಗೆ ವಿಚಾರಿಸುವುದು ತಪ್ಪೆನಲ್ಲ. ಆದರೆ ಬಾಳ್ಜೆಬೂಬನನ ಜೊತೆಗೆ ವಿಚಾರಿಸುವದು ಸೈತಾನನ ರಾಜ್ಯದಲ್ಲಿ ಪ್ರವೇಶಿಸುವುದಕ್ಕೆ ಸಮಾನವಾಗಿದೆ. ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡೂ ಇಂಥ ಕೃತ್ಯಗಳನ್ನು ಖಂಡಿಸಿವೆ (ನೋಡಿರಿ ಯಾಜಕಕಾಂಡ 19; ಧರ್ಮೋಪದೇಶ ಕಾಂಡ 18; ಅಪೊಸ್ತಲರ ಕೃತ್ಯಗಳು 19). ಇಂದು ನಿನ್ನನ್ನು ದೇವರು "ನಕ್ಷತ್ರಗಳನ್ನು ... ಅಥವಾ ಕಾರ್ಡುಗಳನ್ನು ... ಅಥವಾ ಓಝಾಬೋರ್ಡನ್ನ ವಿಚಾರಿಸುವುದಕ್ಕೆ ನೀನು ಹೋದದ್ದಾದರೆದೇವರು ನಿನ್ನನ್ನು ಇಸ್ರಾಯೇಲಿನಲ್ಲಿ ಆತ್ಮೀಕ ದೇವರನ್ನು ನೀನು ಹೊಂದಿಲ್ಲವೋ" ಎಂದು ಕೇಳಬಹುದು.

ಕೆಲವರು ಎಕ್ರೋನಿಗೆ ಮಾನುಷ ತರ್ಕಕ್ಕಾಗಿ ಹೋಗುತ್ತಾರೆ. ಅವರು ವಿಜ್ಞಾನವು ಎಲ್ಲಕ್ಕೂ ಉತ್ತರ ಎಂದು ಯೋಚಿಸುವವರಾಗಿದ್ದಾರೆ. ಕೆಲವರು ಧಾರ್ಮಿಕ ಶಿಕ್ಷಣವು ಭವಿಷ್ಯದ ಮೂಲವಾಗಿ ನಿಂತಿದೆ ಎಂದು ನಂಬುವವರಾಗಿರುತ್ತಾರೆ. ಮಾನವರ ಕಾರಣಗಳನ್ನು ಒಂದು ವೇಳೆ ಸರಿಯಾದ ಸ್ಥಳದಲ್ಲಿ ಇಟ್ಟಿದ್ದಾದರೆ ಅವು ಸಾಧನಗಳಂತೆ ಮೌಲ್ಯವುಳ್ಳವುಗಳಾಗಿವೆ. ಒಡಯರಂತೆ, ಇದು ಕ್ರೂರಿಯೂ, ವಂಚಕವೂ, ನಿರ್ಧಯವೂ ಆಗಿದೆ. "ಆತ್ಮೀಕ ಇಸ್ರಾಯೇಲಿನಲ್ಲಿ ದೇವರಿಲ್ಲವೆಂಬ ನಿನ್ನ ಸಮಸ್ಯೆಗಾಗಿ ಉತ್ತರವನ್ನು ಹುಡುಕಲು ನೀನು

ಜನರೆಡೆಗೆ ನೋಡುತ್ತಿದ್ದೀಯಾ?"

ಇತರರು ಏನೇ ಮಾಡಲಿ, ನಾವು ದೇವರ ವಾಕ್ಯಗಳನ್ನು ಕೇಳುವುದನ್ನು ಕಲಿಯುವಾ.

> *ಸ್ವಬುದ್ಧಿಯನ್ನೇ* ಆಧಾರಮಾಡಿಕೊಳ್ಳದೇ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು; ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು (ಜ್ಞಾನೋಕ್ತಿ 3:5, 6; ಒತ್ತಿ ಹೇಳಿದ್ದು ನನ್ನದು).

*ಎಷ್ಟೇ ವೃದ್ಧರಾದರೂ ನಾವು ದೇವರ ಚಿತ್ತವನ್ನು ತಿರಸ್ಕರಿಸಲಾರೆವು ಎಂಬುದನ್ನು ವಿವೇಚನಾಶೀಲ ಶಿಷ್ಯರಾದ ನಾವು ತಿಳಿದಿದ್ದೇವೆ.* ನಾವು ಎಲೀಯನ ಜೀವಿತವನ್ನು ಮತ್ತು ವಿಶೇಷವಾಗಿ ಕೆಟ್ಟತನಕ್ಕೆ ದಿವ್ಯ ಶಿಕ್ಷೆಯನ್ನೂ ನೋಡುತ್ತಿದ್ದಂತೆಯೇ, ಹಳೆಯ ಒಡಂಬಡಿಕೆ (ಪ್ರಚಲಿತವಿರುವ ಹಳೆಯ ಒಡಂಬಡಿಕೆಯ) ಮತ್ತು ಯಾವುದು ಸರಿಯಾದುದು ಹಾಗೂ ನಿತ್ಯವಾದ ಮೌಲ್ಯವನ್ನು ಹೊಂದಿರುವದು ಅದರ ಮಧ್ಯದಲ್ಲಿನ ವ್ಯತ್ಯಾಸವನ್ನು ಗಮನಿಸುವದು ಅತೀ ಅವಶ್ಯವಾಗಿದೆ.

ಹಳೆಯ ಒಡಂಬಡಿಕೆಯಲ್ಲಿ, ದೇವರು ಒಂದು ನಿರ್ದಿಷ್ಟ ರಾಷ್ಟ್ರದೊಡನೆ (ಇಸ್ರಾಯೇಲರೊಡನೆ) ವ್ಯವಹರಿಸುತ್ತಿದ್ದಾನೆ ಮತ್ತು ಗುಂಪಿನ ಅಸ್ತಿತ್ವ ಮತ್ತು ಪವಿತ್ರತೆಯು ಅತೀ ಮಹತ್ವದ್ದಾಗಿದೆ, ಅಲ್ಪಾವಧಿಯ ಶಿಕ್ಷೆಯು - ಪರಲೋಕದಿಂದ ಬಂದ ಬೆಂಕಿಯು ಈ ದೃಷ್ಯದ ಭಾಗವಾಗಿದೆ. ಹೇಗೋ, ಯೇಸುವು ಯಾಕೋಬ ಮತ್ತು ಯೋಹಾನರಿಗೆ ಸೂಚಿಸಿದಂತೆ ಇದು ಬಲು ಸಮಯದವರೆಗೆ ಸತ್ಯವಾಗಿ ಉಳಿಯದು. ಪೌಲನು ಹೇಳುವಂತೆ "ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು" ಎಂದು ಕರ್ತನು ಹೇಳುತ್ತಾನೆ (ರೋಮಾಪುರ 12:19). ಅಪೊಸ್ತಲರ ಚರ್ಚ್‌ಗಳು ಪಾಷಂಡಿತನವನ್ನು ಕತ್ತಿಯಿಂದ, ಅಲ್ಪ ಶಿಕ್ಷೆಯಿಂದ, ಭಯವನ್ನು ಹುಟ್ಟಿಸುವುದರಿಂದ ಆಳಿಸಿಹಾಕಲು ಸದಾ ಪ್ರಯತ್ನಿಸುತ್ತಿರುತ್ತಿದ್ದವು. ಮುಯ್ಯಿ ತೀರಿ ಸುವುದನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳುವದು ತಪ್ಪಾದುದ್ದಾಗಿದೆ.

ಇದು ಎಲೀಯನು ಮಾಡಿದಂತದ್ದನ್ನು ನಾವು ಬಲವಾಗಿ ನಂಬಬಾರದು, ದೇವರ ವಾಕ್ಯವನ್ನು ಪ್ರೀತಿಸಬಾರದು, ದೇವರ ಮಾರ್ಗವನ್ನು ವಿರೋಧಿಸುವರನ್ನು ದ್ವೇಶಿಸು, ನಮ್ಮ ಎಲ್ಲಾ ಇರುವಿಕೆಯಲ್ಲಿ ಕೆಟ್ಟತನವನ್ನು ಪ್ರತಿಯೊಂದು ದೇವರ ಒಪ್ಪಿತಮಾರ್ಗದಿಂದ ಸೋಲಿ ಸಲು ಹೋರಾಡಬಾರದು ಎಂದರ್ಥಕೊಡುತ್ತದೆಯೇ? ಇಲ್ಲ! ಯೇಸು ಹೇಳಿ ದಂತೆ ನಮ್ಮ ಸವಾಲೆಂದರೆ ನೀತಿವಂತಿಕೆಯನ್ನು ಪ್ರೀತಿಸು ಅನೀತಿಯನ್ನು ದ್ವೇಷಿಸು ಎಂದಾಗಿದೆ (ಇಬ್ರಿಯ 1:9). ಪಾಪಿಗಳನ್ನು ಪ್ರೀತಿಸಲು ಜನರಿಗೆ ಸಹಾಯಿಸುವುದಕ್ಕಾಗಿ ಹೋರಾಡುವದನ್ನು ನಾವು ಕಲಿಯಬೇಕಾಗಿದೆ, ಆದರೆ ದೋಷದೊಡನೆ ಯಾವ ರಾಜಿಯೂ ಸಲ್ಲದು ಎಂಬುದನ್ನೂ ಕೂಡ ನಾವು ಕಲಿಯಬೇಕಾಗಿದೆ!

*ವಿವೇಚನಾಶೀಲ ಶಿಷ್ಯರು ಒಬ್ಬನು ದೇವರ ಚಿತ್ತವನ್ನು ಬೇಗನೇ ಮಾಡುವದರಲ್ಲಿ ಎಂದಿಗೂ ವೃದ್ಧನಾಗಲಾರನು ಎಂದು ಕಲಿಯಬೇಕಾಗಿದೆ.* "ವೃದ್ಧ" ಎಲೀಯನ ಕಥೆಯು ಸಣ್ಣದೂ ಮತ್ತು ಕೆಲ ದೃಷ್ಯಗಳನ್ನೂ ಒಳಗೊಂಡಿದೆ, ಆದರೆ ಇನ್ನೂ ಎಲೀಯನು ದೇವರಿಗಾಗಿ ಸಿದ್ಧನಾದಂತಹ ಸೇವಕನಾಗಿದ್ದನು, ದೇವರ ಸಿಂಹಾಸನದ ಎದುರು ಆತನ ಚಿತ್ತವನ್ನು ಯಾವುದೇ ಆಡಂಬರವಿಲ್ಲದೇ ಮಾಡುವುದಕ್ಕಾಗಿ ನಿಂತುಕೊಂಡಿದ್ದಾನೆ ಎಂಬುದು ನಿಶ್ಚಯವಾದದ್ದು. ವರುಷಗಳು ಉರುಳಿದರೂ ಮತ್ತು ಆತನು ಜೀವನ ಸಂಧ್ಯಾಸಮಯಕ್ಕೆ ಸಮೀಪಿಸಿದ್ದರೂ ಕೂಡಾ ಇದು ನಿಜವಾದುದ್ದಾಗಿದೆ.

ನಮ್ಮ ದಿನದ ಅಸಾಧಾರಣ ಸಂಗತಿಯು "ಸಭೆಯ ನೆರೆಯುವಿಕೆ" ಎಂದು ಕರೆಯಲ್ಪಡುತ್ತದೆ. ಜನರು ಆರೋಗ್ಯವಂತರೂ ಮತ್ತು ದೀರ್ಘಾಯುಷಿಗಳೂ ಆಗಿರುತ್ತಾರೆ.

ಅವರು ತಮ್ಮ ನಿವೃತ್ತಿಯ ನಂತರ ಹೆಚ್ಚು ಒಳ್ಳೆಯ ವರ್ಷಗಳನ್ನು ಹೊಂದಿರುತ್ತಾರೆ. ಕೆಲವರು ತಮ್ಮನ್ನು "ದಣಿಯದಿರುವ ನಿವೃತ್ತಿ" ಎಂದು ಕರೆಯಿಸಿಕೊ ಳ್ಳುತ್ತಾರೆ. ಸಮಾಜವಾದಿಗಳಿಂದ ವೃದ್ಧ ಜನರೊಂದಿಗೆಕ್ರಿಯಾತ್ಮಕ ಜೀವನ ಶೈಲಿ ಎಂಬ ಪಾರಿಭಾಷೆಯು ಬಳಿಕೆಯಾಗುತ್ತದೆ. ಕರ್ತನಿಗಾಗಿ ಈ ಎಲ್ಲಾ ಪ್ರಬುದ್ಧತೆ, ಸಾಮರ್ಥ್ಯ, ಮತ್ತು ಶಕ್ತಿ ಇವುಗಳ ಮೂಲಕ ಒಳ್ಳೆಯ ಚಿತ್ತವು ಹೊರಬರುವದು ಎಂಥ ಒತ್ತಡವಲ್ಲವೇ! ದೇವರಿಗೆ ಸೇವೆಮಾಡುವದು ಕೇವಲ ಯೌವನಸ್ಥರ ಕೆಲಸವಲ್ಲ; ಇದು ನಮ್ಮೆಲರದ್ದು ಆಗಿದೆ.

ಬೈಬಲ್ಲಿನ ಕೆಲ ದೊಡ್ಡ ನಾಯಕರುಗಳು, ಈ ಕಥೆಯಲ್ಲಿನ ಎಲೀಯನಂತವರು ವೈಯಕ್ತಿಕವಾಗಿ ಬೇದ್ಯವಾಗುವಂತಹ ವಯಸ್ಸಿನಲ್ಲಿದ್ದವರು. ಎಲೀಯನ ಕೀರ್ತನೆ 71:17, 18 ರಿಂದ ಪ್ರೋತ್ಸಾಹಿತನಾಗಿದ್ದನು:

> ದೇವರೇ ನೀನು ಬಾಲ್ಯಾರಭ್ಯ ನನ್ನನ್ನು ಉಪದೇಶಿಸುತ್ತಾ ಬಂದಿದ್ದೀ; ನಾನು ನಿನ್ನ ಅದ್ಭುತ ಕೃತ್ಯಗಳನ್ನು ಇಂದಿನವರೆಗೂ ಪ್ರಚುರ ಪಡಿಸುತ್ತಿದ್ದೇನೆ. ದೇವರೇ ನಾನು ನೆರೆಯ ಮುದುಕನಾದಾಗಲೂ ಕೈ ಬಿಡಬೇಡ; ಆಗ ಮುಂದಿನ ತಲೆಯವರಿಗೆ ನಿನ್ನ ಭುಜ ಬಲವನ್ನು ಸಾರುವೆನು, ತಲತಲಾಂತರದವರಿಗೆಲ್ಲಾ ನಿನ್ನ ಪ್ರತಾಪವನ್ನು ಪ್ರಕಟಿಸುವೆನು.

ಮೋಶೆಯು ದೇವರ ಇನ್ನೊಬ್ಬ ಕ್ಷೀರ ಸ್ಪಟಿಕದಂತಹ ಒಂದು ಮಣಿಯಾಗಿದ್ದನು. ಮೋಶೆಯು 80 ವರ್ಷದವನಿದ್ದಾಗ ಆತನು ಇಸ್ರಾಯೇಲ್ಯರನ್ನು ದಾಸ್ಯದಿಂದ ಬಿಡಿಸಲು ನಡಿಸಿದನು ಆತನ ಆ ಪ್ರಯಾಣವು ಸಂಪೂರ್ಣವಾದದ್ದು 120ನೇ ವಯಸ್ಸಿನಲ್ಲಿ ದಾನಿಯೇಲನು ಯೌವನಸ್ಥನಿದ್ದಾಗ ಸಿಂಹದ ಗವಿಯಲ್ಲಿ ಮೋಸತನದಿಂದ ಹಾಕಲ್ಪಟ್ಟನು ಎಂದು ನಾವು ಯಾವಾಗಲೂ ಓದುತ್ತೇವೆ, ಆದರೆ ಆತನ ಜೀವನದ ಕಾಲಾನುಕ್ರಮಗಳನ್ನು ಪರೀಕ್ಷಿಸಿರಿ! ಆತನು ಸಿಂಹದ ಗವಿಯಲ್ಲಿ ಎಸೆಯಲ್ಪಟ್ಟಾಗ ಆತನು ಮುದುಕನಾಗಿದ್ದನು. ಕೆಲವರು ಹಾಸ್ಯ ವಾಗಿ ಹೀಗೆ ಹೇಳುತ್ತಾರೆ ಸಿಂಹಗಳು ಆತನನ್ನು ತಿನ್ನದೆ ಉಳಿಸಿರುವ ಕಾರಣ ದೇವರ ಮುಂದೆ ಸುಧೀರ್ಘವಾಗಿ ನಿಂತುಕೊಂಡ ನಿಮಿತ್ತ ದವಡೆ ಮತ್ತು ಬೆನ್ನಲಬು ಬಿಟ್ಟು ಆತನಲ್ಲಿ ಇನ್ನೇನೂ ಇಲ್ಲದ್ದರಿಂದಲೇ ಎನ್ನುವರು.

ವೃದ್ಧರಾಗಿದ್ದು, ತಮ್ಮನ್ನು ತಾವು ದೇವರ ಸೇವೆಗೆ ಅರ್ಪಿಸಿಕೊಂಡಂತವರಿಗಾಗಿ ನಾವು ದೇವರಿಗೆ ವಂದನೆಯನ್ನು ಸಲ್ಲಿಸಬೇಕಿದೆ ನಮಗಾಗಿ ಎಂಥ ರೋಮಾಂಚಕ ಉದಾಹರಣೆಯು ಇದಾಗಿದೆ![12] ನಮ್ಮಲ್ಲಿ ಎಲ್ಲರೂ ನಮ್ಮ ವಯಸ್ಸನ್ನೂ ಮೀರಿ ದೇವರ ಚಿತ್ತವನ್ನು ಬೇಗನೇ ಮಾಡಬೇಕು ಎಂಬುದನ್ನು ಕಲಿಯಬೇಕು.

## ಮುಕ್ತಾಯ

ಈ ಕಥೆಯಲ್ಲಿ ಬೆಂಕಿಯು ಇದೆ ಎಂಬುದನ್ನು ನಾವು ಅಭ್ಯಾಸಿಸಬೇಕು ಯಾಕೆಂದರೆ ಇದು ಹಳೆಯ ಒಡಂಬಡಿಕೆಯಲ್ಲಿದೆ, ಮತ್ತು ಇಂದು ಅಲ್ಲಿ ಅಂಥ ಸಂಗತಿಗಳು ಇಲ್ಲ. ಅಲ್ಪಕಾಲದ ಶಿಕ್ಷೆಯು ಸಭೆಗಾಗಿನ ದೇವರ ರೀತಿಯ ವಿವೇಚನಾಶೀಲ ಭಾಗವಾಗಿರಲಾರವು, ಆದರೆ ಈ ಬಗೆಗೆ ನಾವು ಮೋಸಹೋಗಬಾರದು. ಬೆಂಕಿಯು ಇನ್ನೂ ದೇವರ ಯೋಜನೆಯ ಭಾಗವಾಗಿದೆ, ಮತ್ತು ಇದು ಯೇಸು ನ್ಯಾಯಾಧೀಶನಾಗಿ ಬರುವಾಗ ಇದು ಅಧಾರ್ಮಿಕರ ಮೇಲೆ ಬೀಳುತ್ತದೆ!

> ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀಕಾರವನ್ನು ಸಲ್ಲಿಸುವನು. ಆ ದಿನದಲ್ಲಿ ಆತನು

ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದುವವನಾಗಿಯೂ ಇದ್ದಾನೆ (2 ಥೆಸಲೋನಿಕ 1:7-9).

ನಾವು ಮೂರನೆ ಐವತ್ತು ಜನರ ಗುಂಪಿನ ಅಧಿಪತಿಯಂತೆ ಬುದ್ಧಿವಂತರಾಗಿರೋಣ. ಆತನು 102 ಸೈನಿಕರು ಇದ್ದಿಲುಗಳಂತೆ ಉಳಿಯುವ ಮಾರ್ಗವನ್ನು ಅರಿಸದೇ ಆತನ ಮುಂದೆ ಹೋದನು, ಆತನು ತನ್ನನ್ನು ತಾನು ಕರುಣೆಯಲ್ಲಿ ಇರಿಸಿಕೊಳ್ಳುವ ಒಂದೇ ನಿರೀಕ್ಷೆಯನ್ನು ದೇವರ ಮನುಷ್ಯನ ಮುಂದೆ ಇಟ್ಟನು - ಮತ್ತು ಕರಣೆಯು ಆತನಿಗೆ ತೋರಿಸಲ್ಪಟ್ಟಿತು.

ಯೇಸು ನಾಶಮಾಡಲು ಬಂದಿರಲಿಲ್ಲ, ಆದರೆ ರಕ್ಷಿಸಲು ಬಂದನು. ನಾವು ರಕ್ಷಿಲ್ಪಡುವುದಕ್ಕಾಗಿ ಆತನು ನಿನಗಾಗಿ, ಮತ್ತು ನನಗಾಗಿ ಸತ್ತನು. ಹೇಗೋ, ಆತನು "ಹಾಗೆ ಭಾವಿಸಕೂಡದೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳ ದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ" (ಲೂಕ 13:3). ನೀವು ನಿಮ್ಮ ಸ್ವಾರ್ಥವನ್ನು ಶಿಲುಬೆಯ ಅಡಿಯಲ್ಲಿ ಹಾಕಿರಿ ಮತ್ತು ಅಳಿರಿ, "ಕರ್ತನೇ, ನಾನು ಪಶ್ಚಾತ್ತಾಪಪಟ್ಟಿದ್ದೇನೆ. ನಾನು ನನ್ನ ಮಾರ್ಗವನ್ನು ಬದಲಾಯಿಸಿಕೊಂಡಿದ್ದೇನೆ. ನಾನು ನಿನ್ನ ಚಿತ್ತವನ್ನು ಮಾಡಲು ಬಯಸುವವನಾಗಿದ್ದೇನೆ. ದಯಮಾಡಿ ನನ್ನ ಜೀವಿತವು ನಿನ್ನ ದೃಷ್ಟಿಯಲ್ಲಿ ಮೌಲ್ಯಯುತ ವಾಗಿರಿಸಲ್ಪಡಲಿ"?

ಟಿಪ್ಪಣಿಗಳು

[1]ಯೆಹೂದಿಗಳ ಕಾಲವನ್ನು ಪರಿಗಣಿಸುವುದರ ಪ್ರಕಾರ ಇದು ಸಂಪೂರ್ಣತೆಯಲ್ಲಿ ಒಂದು ಭಾಗವನ್ನು ತೆಗೆದುಕೊಂಡಂಥದ್ದಾಗಿದೆ. ನಮ್ಮ ಪರಿಗಣನೆಯ ಪ್ರಕಾರ, ಆತನು ಒಂದು ವರ್ಷಕ್ಕಿಂತ ಸ್ವಲ್ಪ ಹೆಚ್ಚಿನದನ್ನು ತಿರುಗಿ ಪಡೆದನು. [2]1 ಮತ್ತು 2ನೇಯ ಅರಸು ಮೂಲತವಾಗಿ ಒಂದೇ ಪುಸ್ತಕವಾಗಿದೆ ಎಂಬುದನ್ನು ನೆನಪಿಡಿರಿ. ಅವುಗಳು ಸ್ಪೆಟುಗೆಂಟ ಭಾಷಾಂತರಕಾರರಿಂದ ವಿಭಾಗಿಸಲ್ಪಟ್ಟಿದ್ದು ಅವುಗಳು ಎರಡು ಸುರುಳಿಗಳಲ್ಲಿ ಆ ಪುಸ್ತಕಗಳನ್ನು ಹಾಕುವ ಮೂಲಕ ಅವರಿಗೆ ಇದು ಬಲು ಸುಲಭವಾ ದಂತೆ ಕಂಡಿತು. ಅವುಗಳು ಎಲ್ಲಿ ವಿಭಾಗವು ಬರಬೇಕು ಎಂಬುದಕ್ಕೆ ಹೆಚ್ಚು ಒತ್ತು ಕೊಡದೇ ಮಾಡಿದಂತವುಗಳಾಗಿವೆ. [3]ಇದು ಹೆಚ್ಚು ಕಡಿಮೆ ದಾವೀದನ ಕಾಲದಿಂದಲೂ ಇದ್ದವುಗಳು (2 ಸಮುವೇಲ 8:2). [4]ಎರಡನೆಯ ಅರಸು 3:4-27 ಈ ಬಂಡೇಳುವಿಕೆಯ ಸಂಪೂರ್ಣ ವರದಿಯನ್ನು ಕೊಡುತ್ತದೆ. [5]ಯಾವುದೇ ವ್ಯಕ್ತಿಯು ಇಂಥ ಅಪಾದನೆಯನ್ನು ಮಾಡಿದ್ದಾದರೆ ಅದು ಆತನ ಅಜ್ಞಾನವನ್ನು ತೋರಿಸುವುದಾಗಿದೆ. [6]ಇದು William G. Golding ರಿಂದ ಬರೆಯಲ್ಪಟ್ಟಿತು. [7]ನಿಮ್ಮ ಬೆರಳಿನ ಜೊತೆ ಅದರ ಅಳತೆಯನ್ನು ತೋರಿಸಿರಿ. [8]ಇದು ವ್ಯಕ್ತಿಯನ್ನೋ ಅಥವಾ ಆತನ ಬಟ್ಟೆಯನ್ನೋ ಸೂಚಿಸಬಹುದಾಗಿದೆ. ಜೆಕರ್ಯ 13:4; ಮತ್ತಾಯ 3:4ನ್ನು ನೋಡಿರಿ. [9]ಆತನು ಎಲೀಯನನ್ನು "ದೇವರ ಮನುಷ್ಯ" (ಇದು ಪ್ರವಾದಿಯ ಒಂದು ಪದವಿಯಾಗಿತ್ತು) ಎಂದು ಪ್ರಾಮಾಣಿಕನಾಗಿ ಕರೆಯುತ್ತಿದ್ದಾನೆ ಅಥವಾ ಅದನ್ನು ಅವಹೇಳನರಕರವಾಗಿ ಕರೆದನೇ? ಬಹುಶಃ ನಂತರದ್ದಾಗಿರಬೇಕು. [10]ಇದು ನಿಜವಾಗಿಯೂ ಸಾಮಾನ್ಯವಾಗಿ ಮಿಂಚುವುದಾಗಿರಲಿಲ್ಲ. ಈ ಮಿಂಚುವಿಕೆಯು ಜನರನ್ನು ಕೊಲ್ಲಬಹುದು, ಆದರೆ ಸಾಮಾನ್ಯವಾಗಿ ನಾವು ಅವರನ್ನು "ಕಬಳಿಸುವದು" ಎಂದು ಹೇಳುವುದಿಲ್ಲ.

[11]ಜೋಸ್ಪಸ್‌ನ್ *The Life and Works of Flavius Josephus*, trans. Willam Whiston (Philadelphia: John C. Winston Co., 1957), 277, n. [12]ನೀನು ಒಂದು ನಿರ್ದಿಷ್ಟ ಉದಾಹರಣೆಗಳನ್ನು ಇಲ್ಲಿ ಕೊಡಬಹುದು.

## ಪಾಠದ ರೂಪರೇಷೆ

**ಪೀಠಿಕೆ**

A. ಎರಡನೆಯ ಅರಸು 1ನೇ ಅಧ್ಯಾಯವು ಎಲೀಯನ ಜೀವನದ ಒಂದು ಚಿಕ್ಕ ಘಟನೆಯನ್ನು ಹೇಳುವದಾಗಿದೆ.

1. ನಾವು ಅಧ್ಯಾಯ 1ನ್ನು ತಪ್ಪಿಸಿಕೊಂಡಿದ್ದಾದರೆ ನಮ್ಮ ಸರಣಿಗಳು ಅಪೂರ್ಣವಾದಂತೆ.
2. ಇಲ್ಲಿನ ಕೆಲ ಪಾಠಗಳು ಎಲೀಯನ ಮೇಲಿನ ಇತರೆ ಭಾಗಗಳಲ್ಲಿ ಸಿಕ್ಕುವುದಿಲ್ಲ.
3. ನಮಗೆ ನಮ್ಮ ಸಡಿಲವಾದ ಕೊನೆಯನ್ನು (ಚದುರಿದ ವಿಷಯಗಳನ್ನು ಕೂಡಿಸಿ ನೋಡುವದು) ಜೋಡಿಸುವ ಅವಶ್ಯಕತೆಯು ಇದೆ.

B. ನಾವು ಮೂವರು ವ್ಯಕ್ತಿಗಳನ್ನು ನೋಡುತ್ತೇವೆ. ಇಬ್ಬರು ನಮ್ಮ ವೇದಭಾಗದಲ್ಲಿ ಸಿಕ್ಕುವರು. ಮೂರನೇವರು ನಮ್ಮ ವೀಕ್ಷಕರು.

I. ಉತ್ತರ ಇಸ್ರಾಯೇಲಿನ ಬಂಡೆದ್ದ ಅರಸನು (1:1-9)

A. ಈ ದಂಗೆ ಎದ್ದ ಅರಸನು ಆಹಾಬನಲ್ಲ, ಆದರೆ ಅವನ ಬದಲಾಗಿ ಆತನ ಮಗನಾದ ಅಹಜ್ಯನಾಗಿದ್ದನು (1 ಅರಸು 22:37, 38, 40). ಅಹಜ್ಯನ ಬಗೆಗಿನ ಮೂರು ಸಂಗತಿಗಳನ್ನು ಗಮನಿಸಿರಿ.

1. ಆತನು ತನ್ನ ಹಿಂದಿನ ಜೀವಿತವನ್ನು ಅಲಕ್ಷಿಸಿದನು (1 ಅರಸು 22:51-2 ಅರಸು 1:1).
   a. ಅಹಜ್ಯನು ಎಲೀಯನ ಕಥೆಗಳಿಂದ ಮತ್ತು ತನ್ನ ಹಿಂದಿನ ಜೀವಿತ ದಿಂದ ಕಲಿಯಬೇಕಿತ್ತು ಆದರೆ ಆತನು ಅದರಿಂದ ಕಲಿಯಲಿಲ್ಲ (1 ಅರಸು 22:51-53).
   b. ಆತನು ತನ್ನ ಆಳ್ವಿಕೆಯನ್ನು ಆರಂಭಿಸುತ್ತಿದ್ದಂತೆಯೇ ಸಮಸ್ಯೆಯು ಉದ್ಭವವಾಯಿತು (2 ಅರಸು 1:1) ಪ್ರೇರಿತನಾದ ಬರಹಗಾರನು ಹೇಳುವಂತೆ ಒಂದು ಚಿಕ್ಕ ಘಟನೆಯು ಆಹಾಬನ ಅಲ್ಪಾವಧಿಯು ಮುಗಿಯುವದಕ್ಕೆ ಕಾರಣವಾಯಿತು.
2. ಆತನು ದೊಡ್ಡ ವೈದ್ಯನನ್ನು ಅವಮಾನಿಸಿದನು (2 ಅರಸು 1:2-4).
   a. ಅಹಜ್ಯನು ಕಿಟಕಿಯಿಂದ ಬಿದ್ದು ಗಂಭೀರವಾಗಿ ಗಾಯಗೊಂಡನು (ವಚನ 2). ಇದು ಬಹುಶಃ ಆತನನ್ನು ಯೆಹೋವನೆಡೆಗೆ ಹಿಂತಿರುಗಿ ಕರೆಯುವದಕ್ಕೆ ಇದ್ದಿರಬಹುದು (ಕೀರ್ತನೆ 119:71). ಅದರ ಬದಲಾಗಿ ಆತನು ಬೆಳ್ಜಿಬೂಬನೆಡೆಗೆ ತನ್ನ ವಾಸಿಯಾಗುವುದರ ಬಗೆಗೆ ವಿಚಾರಿಸುವುದಕ್ಕೆ ದೂತರನ್ನು ಕಳುಹಿಸುವ ಮೂಲಕ ದೊಡ್ಡ ವೈದ್ಯನನ್ನು ಅವಮಾನಿಸಿದನು (ವಚನ 2).
      (1) ಬಾಳ್ಜೆಬೂಬ ಎಂದರೆ "ಹುಳುಗಳ ದೇವರು" ಸದಾ ಕಿರಿಕಿರಿಯನ್ನು ಉಂಟುಮಾಡುವವ ಸಾಮರ್ಥ್ಯವನ್ನು ಹೊಂದಿರುವವನು ಅಥವಾ ಕಿರಿಕಿರಿಯ ಮೂಲವನ್ನು ತೆಗೆಯುವವನು ಎಂದು.
      (2) ಬಾಳ್ಜೆಬೂಬನು ಸ್ವಸ್ಥಮಾಡುವುದರ ಜೊತೆ ಸಂಬಂಧಿತನಾದವನು (ಗಮನಿಸಿರಿ ಮತ್ತಾಯ 12:22-28).
   b. ದೇವರು ಅಹಜ್ಯನ ದೂತರಿಗೆ ಆತನು ವಾಸಿಯಾಗಲಾರ ಎಂಬುದನ್ನು ತಿಳಿಸಲು ಎಲೀಯನನ್ನು ಕಳುಹಿಸುತ್ತಾನೆ (ವಚನಗಳು 3, 4; ಈ ಸೂಚನೆಯಿಂದ ಅಹಜ್ಯನು ಪಶ್ಚಾತ್ತಾಪಪಡಲಿಲ್ಲ ಮತ್ತು ಆತನೆಡೆಗೆ ಬರಲಿಲ್ಲ).
3. ಆತನು ಪ್ರವಾದಿಯನ್ನು ಹೆದರಿಸಲು ಪ್ರಯತ್ನಿಸಿದನು (2 ಅರಸು 1:5-9)
   a. ಏನು ಸಂಭವಿಸಿತು ಎಂಬುದನ್ನು ದೂತರು ಹೇಳಿದಾಗ ಅದು

ಎಲೀಯನಿಂದಲೇ ಎಂದು ಆತನಿಗೆ ತಿಳಿಯಿತು (ವಚನಗಳು 5-8).

b. ಆತನು ಐವತ್ತು ಜನ ಸಿಪಾಯಿಗಳನ್ನು ಪಂಚಾಶದಧಿಪತಿಯೊಡನೆ ಎಲೀಯನನ್ನು ಕರೆತರಲು ಕಳುಹಿಸಿದನು (ವಚನ 9).

B. ಆಹಾಬನು ಪಶ್ಚಾತ್ತಾಪಡಲೆಂದು ದೇವರು ಕೊಟ್ಟ ಅವಕಾಶ ಇದಾಗಿತ್ತು, ಮರಣ ಸಂದೇಶವು ಒಬ್ಬ ಮನುಷ್ಯನನ್ನು ನಿಂತು ಯೋಚಿಸುವಂತೆ ಮಾಡದಿದ್ದರೆ ಏನೂ ಆಗದು. ಬದಲಾಗಿ ಅಹಜ್ಯನು ಕೋಪಗೊಂಡನು.

II. ಉತ್ತರ ಇಸ್ರಾಯೇಲಿನ ಬಲಯುತವಾದ ಪ್ರವಾದಿ (1:9-17). ಎಲೀಯನು ವೃದ್ಧನಾದನು, ಆದರೆ ಆತನು ಇನ್ನೂ ಇಸ್ರಾಯೇಲಿನಲ್ಲಿಯ ದೇವರ ಸೇವಕನಾಗಿದ್ದನು. ಆತನ ಬಗೆಗಿನ ಮೂರು ಸಂಗತಿಗಳನ್ನು ಗಮನಿಸಿರಿ:

A. ಆತನು ದೇವರ ಚಿತ್ತವನ್ನು ತಿಳಿದುಕೊಳ್ಳುವಂತೆ ಮಾಡಿದನು (ವಚನಗಳು 3, 4).

B. ಆತನು ದೇವರ ಕಾರ್ಯವನ್ನು ಮಾಡಿದನು (ವಚನಗಳು 9-15).

1. ಬೆಂಕಿಯು ಮೊದಲ ಐವತ್ತು ಮತ್ತು ಒಬ್ಬನನ್ನು ದಹಿಸಿಬಿಟ್ಟಿತು (ವಚನಗಳು 9, 10)
2. ಅಹಜ್ಯನು ಇನ್ನೂ ಐವತ್ತು ಮತ್ತೊಬ್ಬನನ್ನು ಕಳುಹಿಸಿದನು ಮತ್ತು ಬೆಂಕಿಯು ಅವರನ್ನೂ ದಹಿಸಿಬಿಟ್ಟಿತು (ವಚನಗಳು 11, 12). ಈ ಸಾರಿ ಇಲ್ಲಿ "ದೇವರ ಬೆಂಕಿ" ಎಂದು ಹೇಳಲ್ಪಟ್ಟಿದೆ. ಎಲೀಯನು ದೇವರ ಕಾರ್ಯವನ್ನು ಮಾಡುತ್ತಿದ್ದನು.
3. ಅಂತಿಮವಾಗಿ ಒಬ್ಬ ಅಧಿಪತಿಯು ಒಳ್ಳೆಯ ವಿಚಾರ ಹೊಂದಿದವನಾಗಿದ್ದನು ಮತ್ತು ಉಳಿದನು (ವಚನಗಳು 13, 14) ಎಲೀಯನು ಆತನೊಡನೆ ಅರಸನೆಡೆಗೆ ಹೋದನು (ವಚನ 15).

C. ಆತನು ದೇವರ ವಾಕ್ಯವನ್ನು ದೃಢಿಕರಿಸಿದನು (ವಚನಗಳು 16, 17).

1. ಅರಸನಿಗೆ ದೇವರ ಸಂದೇಶವು ತಿರುಗಿ ಅದೇ ಆಗಿತ್ತು (ವಚನ 16); ದೇವರ ಮಾತು ಎಂದಿಗೂ ಬದಲಾಗದು. ಎಲೀಯನು ದೇವರು ತನಗೆ ಮಾಡಲು ಹೇಳಿದುದೆಲ್ಲವನ್ನೂ ಮಾಡಿದನು; ಆತನ ಸಾರ್ವಜನಿಕ ಸೇವೆಯು ಸಂಪೂರ್ಣವಾಯಿತು.
2. ದೇವರು ಹೇಳಿದಂತೆ ಅಹಜ್ಯನು ಮರಣಹೊಂದಿದನು (ವಚನ 17); ದೇವರ ವಾಕ್ಯವು ಖಚಿತವಾದುದ್ದು.

III. ಆತ್ಮೀಕ ಇಸ್ರಾಯೇಲಿನ ವಿವೇಚನಾಶೀಲ ಶಿಷ್ಯರು

A. ದೇವರು ಈ ದುಃಖಮಯವಾದ ಚಿಕ್ಕಕಥೆಯನ್ನು ನಮಗಾಗಿ ಇರಿಸಿದ್ದಾನೆ (ರೋಮಾಪುರ 15:4; 1 ಕೊರಿಂಥ 10:11) ಈ ಪಾಠವು ನಮ್ಮೊಂದಿಗೆ ಅಸಂತುಷ್ಟರಾಗಿರುವವರ ಮೇಲೆ ಆಕಾಶದಿಂದ ಬೆಂಕಿಯನ್ನು ಸುರಿಸುವುದಲ್ಲ (ಲೂಕ 9:54-56) ಬದಲಾಗಿ, ವಿವೇಚನಾಶೀಲ ಶಿಷ್ಯರು ಈ ವೃತ್ತಾಂತದಿಂದ ಕನಿಷ್ಠ ಪಕ್ಷ ಮೂರು ಪಾಠಗಳನ್ನಾದರೂ ಕಲಿಯಬೇಕು:

1. ದೇವರ ವಾಕ್ಯವನ್ನು ತಿಳಿಸಲು ನಾವು ಎಂದಿಗೂ ವೃದ್ಧರಾಗುವುದಿಲ್ಲ.
   a. ಎಲೀಯನು ಮುದುಕನಾಗಿದ್ದಾಗಲೂ ಆತನು ಇನ್ನೂ "ದೇವರ ಮಾತುಗಳಿಗಾಗಿ ಕಾಯುತ್ತಿದ್ದನು."
   b. ಅಹಜ್ಯನು ದೇವರ ವಾಕ್ಯಗಳಿಗಾಗಿ ಕಾಯಲಿಲ್ಲ, ಆದರೆ ಎಕ್ರೋನಿನ ವಾಕ್ಯ ಕ್ಕಾಗಿ ಕಾಯ್ದನು.
      (1) ಅಹಜ್ಯನು ದೇವರ ವಾಕ್ಯಗಳಿಗಾಗಿ ಹೋಗದೇ

ಮೂಢನಂಬಿಕೆಯ ಎಕ್ರೋನಿನ ವಾಕ್ಯಕ್ಕಾಗಿ ಕಾಯ್ದನು. ಹಸ್ತಸಾಮುದ್ರಿಕಾ ಶಾಸ್ತ್ರ. ಟಾರೋಟ್ ಕಾರ್ಡ್, ಭವಿಷ್ಯವಾಣಿ ಓಝ್ಯಾಬೋರ್ಡ್ ಆತ್ಮೀಕತೆಗಳು, ಸೈತಾನತೆ ಮುಂತಾದವುಗಳು ಇವೆ. ಅದರಲ್ಲಿ ಅನೇಕವು "ಮೋಜಿಗಾಗಿ" ಮಾಡುವಂತವುಗಳಾಗಿರುತ್ತವೆ ಮತ್ತು ಮಾಂತ್ರಿಕ ಜಗತ್ತಿನೊಡನೆ ಅರಿಯದ ಚೆಲ್ಲಾಟವಾಗಿದೆ ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡೂ ಇಂಥ ಕೃತ್ಯಗಳನ್ನು ಖಂಡಿಸಿವೆ (ನೋಡಿರಿ ಯಾಜಕಕಾಂಡ 19; ಧರ್ಮೋಪದೇಶಕಾಂಡ 18; ಅಪೊಸ್ತಲರ ಕೃತ್ಯಗಳು 19).

(2) ಕೆಲವರು ಎಕ್ರೋನಿಗೆ ಮಾನುಷ್ಯ ತರ್ಕಕ್ಕಾಗಿ ಹೋಗುತ್ತಾರೆ. ಅವರು ವಿಜ್ಞಾನವು ಎಲ್ಲಕ್ಕೂ ಉತ್ತರ ಎಂದು ಯೋಚಿಸುವವರಾಗಿದ್ದಾರೆ (ಜ್ಞಾನೋಕ್ತಿ 3:5, 6).

2. ವಿವೇಚನಾಶೀಲ ಶಿಷ್ಯರಾದ ನಾವೆಂದಿಗೂ ದೇವರಿಗೆ ವಿರುದ್ಧವಾಗಿರುವಂತಹ ಬಹಳ ವೃದ್ಧರಾಗುವುದನ್ನು ನಾವು ದ್ವೇಶಿಸಲಾರೆವು.
   a. ನಾವು ಕೆಟ್ಟತನಕ್ಕೆ ದಿವ್ಯ ಶಿಕ್ಷೆಯನ್ನು ನೋಡುವಾಗ ಯಾವುದು ಅಲ್ಪಾವಧಿ ಮತ್ತು ನಿತ್ಯವಾದುದ್ದು ಎಂಬುದರ ಮಧ್ಯದ ಅಂತರವನ್ನು (ಹಳೆಯ ಮತ್ತು ಹೊಸ ಒಡಂಬಡಿಕೆಯಲ್ಲಿ) ನಿತ್ಯವಾದುದ್ದು ಎಂಬುದರ ಮಧ್ಯ ಅಂತರವನ್ನು ಕಾಣುತ್ತೇವೆ.
      (1) ದೇವರು ಮೆಸ್ಸೀಯನು ಬರಲಿರುವ ರಾಷ್ಟ್ರದ ಜನರನ್ನು ರಕ್ಷಿಸುವವನಾಗಿದ್ದಾನೆ. ದೈಹಿಕ ಶಿಕ್ಷೆಯು ಅವರನ್ನು ರಕ್ಷಿಸಲು ಅವಶ್ಯವಿದೆ.
      (2) ಇದು ಬಹಳ ದಿನದ ಪ್ರಕರಣವಲ್ಲ.
   b. ಎಲೀಯನು ಸೈತಾನನ ಬಗ್ಗೆ ಮಾಡಿದಂತದ್ದನ್ನು ನಾವು ಬಲುವಾಗಿ ನಂಬಬಾರದು, ಎಂಬುದು ಇದರ ಅರ್ಥವಲ್ಲ. ದೇವರ ವಾಕ್ಯವನ್ನು ಪ್ರೀತಿಸುವದಕ್ಕೆ ದೇವರ ಮಾರ್ಗವನ್ನು ವಿರೋಧಿಸುವರನ್ನು ದ್ವೇಶಿಸುವದಕ್ಕೆ ಅವಶ್ಯಕವಾಗಿರುವಂತದ್ದು ನಮಗೆ ಇನ್ನೂ ಬೇಕಾಗಿದೆ (ಇಬ್ರಿಯ 1:9; ಮುಂತಾದವು).
3. ಒಬ್ಬನು ದೇವರ ಚಿತ್ತವನ್ನು ಬೇಗನೇ ಪರಿಪೂರ್ಣಗೊಳಿಸಲು ಬಲು ವೃದ್ಧನಾಗಿರುವುದಿಲ್ಲ.

**ಮುಕ್ತಾಯ**

A. ಬೆಂಕಿಯು ಅವಿಧೇಯರ ಮೇಲೆ ಬೀಳುತ್ತದೆ - ಈ ಜೀವಿತದಲ್ಲಿ ಅಲ್ಲ ಆದರೆ ಯೇಸು ತಿರುಗಿ ಬರುವಾಗ (2 ಥೆಸಲೋನಿಕ 1:7-9).

B. ನಾವು ಮೂರನೆ ಐವತ್ತು ಜನರ ಗುಂಪಿನ ಅಧಿಪತಿಯಂತೆ ಬುದ್ಧಿವಂತರಾಗಿರೋಣ. ಆತನು ಮನುಷ್ಯರು ಇದ್ದಿಲುಗಳಂತೆ ಉಳಿಯುವ ಮಾರ್ಗವನ್ನು ಆರಿಸದೇ ಆತನ ಮುಂದೆ ಹೋದನು, ಆತನು ತನ್ನನ್ನು ತಾನು ಕರುಣೆಯ ಇರಿಸಿಕೊಳ್ಳುವ ಒಂದೇ ನಿರೀಕ್ಷೆಯನ್ನು ದೇವರ ಮನುಷ್ಯನ ಮುಂದೆ ಇಟ್ಟನು ದೇವರು ಎಲೀಯ ಕರುಣೆಯನ್ನು ತೋರಿಸುವಂತೆ ಆತನಿಗೂ ಕರುಣೆಯನ್ನು ತೋರಿಸಿದನು.